ಹೊಸ ಮನುಷ್ಯ


ಬೆಲೆ ೧೦-೦೦

ಚಿಂತನ * ದರ್ಶನ * ವಿಮರ್ಶನ

ಜನಪದ ಸೇವಾ ಟ್ರಸ್ಟ್ ಪ್ರಕಟಣೆ

ತಿಂಗಳ ವೈಚಾರಿಕ ಡೈಜೆಸ್ಟ್

ಸಂಪುಟ-೮ ಅಕ್ಟೋಬರ್--೨೦೦೭ ಸಂಚಿಕೆ-೩



೧೨೩ ಒಪ್ಪಂದ ಮತ್ತು ಗಾಂಧೀ

ಜನಪದ ವಿಚಾರದಲ್ಲಿ

ಜನಪದ ವಿಚಾರ

ತಿಂಗಳ ವೈಚಾರಿಕ ಡೈಜಸ್ಟ್

ಅಕ್ಟೋಬರ್-೨೦೦೭

ಸಂಪುಟ-[illegible]

ಸಂಚಿಕೆ-೩

ಸಂಪಾದಕ

ಸುರೇಂದ್ರ ಕೌಲಗಿ

ಸಲಹಾ ಸಮಿತಿ

ಜನಪದ ಸೇವಾ ಟ್ರಸ್ಟ್

ಧರ್ಮದರ್ಶಿ ಮಂಡಳಿ

ಚಂದಾ ವಿವರ

ವಾರ್ಷಿಕ : ರೂ ೧೦೦/-

ಬಿಡಿ ಸಂಚಿಕೆ : ರೂ ೧೦/-

ಸಂಪರ್ಕ ವಿಳಾಸ

ಜನಪದ ಸೇವಾ ಟ್ರಸ್ಟ್(ರಿ)

ಮೇಲುಕೋಟೆ-೫೭೧೪೩೧

ಜಿಲ್ಲಾ ಮಂಡ್ಯ

☏ ೦೮೨೩೬ ೨೯೮[illegible]

e-mail - janapada@yahoo.com

ನಿಂತಿರುವರು ಗಾಂಧೀಜಿ

ಸತ್ಯದೊಂದು ದೀಪವಾಗಿ
ಕರುಣೆಯೊಂದು ರೂಪವಾಗಿ
ಶ್ರದ್ಧೆಯೊಂದು ಗೀತವಾಗಿ ವಿಶ್ವದಂತರಂಗದಿ
ನಿಂತಿರುವರು ಗಾಂಧೀಜಿ

[illegible]ತವರೊಳ್ [illegible]ಣ್ಣ ತೆರೆಸಿ
ದಲಿತರ ಕಂ[illegible]ನಿಯನೊರಸಿ
ಘನತೆಯಲ್ಲಿ ಮನವ ನಿಲಿಸಿ ನಮ್ಮ ಅಂತರಂಗದಿ
ನಿಂತಿರುವರು ಗಾಂಧೀಜಿ

ನವರಾಷ್ಟ್ರದ ಮಾನವಾಗಿ
ಜಗದೈಕ್ಯದ [illegible]ನವಾಗಿ
ತನನ ತನನ ತಾನವಾಗಿ ಕವಿಗಳಂತರಂಗದಿ
ನಿಂತಿರುವರು ಗಾಂಧೀಜಿ

ಸದಾ ಕರ್ಮಯೋಗ ನಿರತ
ಸಮದೃಷ್ಟಿಯುದಾತ್ತ ಚರಿತ
ಸಮ ಚಿತ್ತಾನಂದಭರಿತರಾಗಿ ಅಂತರಾತ್ಮದಿ
ನಿಂತಿರುವರು ಗಾಂಧೀಜಿ

ಮಾನವತೆಯ ಮೇರುವಾಗಿ
ಸಜ್ಜನಿಕೆಯ ಸಾರವಾಗಿ
ಸದ್ಭಾವದ ತೀರವಾಗಿ ಚಿತ್ತಭೂಮಿವ್ಯೋಮದಿ
ನಿಂತಿರುವರು ಗಾಂಧೀಜಿ

ಧವಳ ಕೀರ್ತಿಯೊಂದು ಮೂರ್ತಿ
ಆತ್ಮವಿಕಸನಕ್ಕೆ ಸ್ಫೂರ್ತಿ
ನೀತಿಪಥದ ವಿಮಲ ಜ್ಯೋತಿಯಾಗಿ ಜಗದಪೀಠದಿ
ನಿಂತಿರುವರು ಗಾಂಧೀಜಿ

ದಿಟವನೆಂದು ಮರೆಯದಂತೆ
ದಯವನೆಂದು ತೊರೆಯದಂತೆ
ಘನಕೆ ಮನವ ತೆರೆಯುವಂತೆ ನಮ್ಮ ಅಂತರಂಗದಿ
ನಿತ್ಯ ನಿಲಲಿ ಗಾಂಧೀಜಿ!

– *ಡಿ.ಎಸ್.ಕರ್ಕಿ*

ವಿಚಾರ ದೀಪ್ತಿ

ನಾನೊಬ್ಬ ಸತ್ಯಶೋಧಕ. ಅದಕ್ಕೊಂದು ಮಾರ್ಗವನ್ನು ಕಂಡುಕೊಂಡಿದ್ದೇನೆಂದು ನನ್ನ ವಿಶ್ವಾಸ. ಅದರ ಸಿದ್ಧಿಗಾಗಿ ನಾನು ನಿರಂತರ ಪ್ರಯತ್ನಶೀಲನಾಗಿದ್ದೇನೆಂದೂ ನನ್ನ ನಂಬಿಕೆ. ಅದು ಇನ್ನೂ ನನಗೆ ಸಿದ್ಧಿಸಿಲ್ಲ ಎಂಬುದನ್ನು ಒಪ್ಪಕೊಳ್ಳುತ್ತೇನೆ. ಸತ್ಯದ ಸಮ್ಯಕ್ ದರ್ಶನವೇ ಆತ್ಮ ಸಾಕ್ಷಾತ್ಕಾರ; ಅದೇ ಜೀವನದ ಅಂತಿಮ ಗುರಿ. ಅಂದರೆ ಪರಿಪೂರ್ಣತೆಯ ಸಿದ್ಧಿ. ನನ್ನ ನ್ಯೂನ್ಯತೆಗಳು ಎಷ್ಟೆಂಬುದನ್ನು ನಾನು ವ್ಯಸನದಿಂದ ಅರಿತಿದ್ದೇನೆ. ಆ ಅರಿವು ನನಗೆ ದುಃಖ ತರುವಷ್ಟೂ ಇದೆ. ಆ ಅರಿವೇ ನನ್ನ ಶಕ್ತಿಯ ಸರ್ವಮೂಲ; ಏಕೆಂದರೆ ತನ್ನ ದೌರ್ಬಲ್ಯಗಳ ಅರಿವಾಗುವುದೇ ಮಾನವನಿಗೆ ಒಂದು ಅಪೂರ್ವ ಬಲ.

ಭಾರತದ ಸ್ವಾತಂತ್ರ್ಯ ಸಾಧನೆಯೇ ನನ್ನ ಜೀವಿತೋದ್ದೇಶ್ಯ. ನಾನು ಅದಕ್ಕಾಗಿ ಸಾಯಲು ಕೂಡ ಸಿದ್ಧ. ಏಕೆಂದರೆ ಭಾರತದ ಸ್ವಾತಂತ್ರ್ಯ ಸತ್ಯದ ಒಂದು ಅಂಶ. ಬಂಧಮುಕ್ತವಾದಾಗಲೆ ಭರತಖಂಡ ಸತ್ಯಸ್ವರೂಪನಾದ ಭಗವಂತನನ್ನು ಪೂಜಿಸಬಲ್ಲದು, ಭಾರತದ ಬಿಡುಗಡೆಗಾಗಿ ನಾನು ದುಡಿಯುತ್ತಿದ್ದೇನೆ; ಏಕೆಂದರೆ ಭಾರತದಲ್ಲಿ ಬದುಕಿ ಅದರ ಸಂಸ್ಕೃತಿಯನ್ನು ಪಡೆದಿರುವುದರಿಂದ ಅದರ ಸೇವೆಗೆ ನಾನು ಅತ್ಯಂತ ಅರ್ಹ ಎಂಬುದನ್ನು, ನನ್ನ ಸೇವೆಯ ಮೊದಲ ಹಕ್ಕು ಭಾರತದ್ದು ಎಂಬುದನ್ನು ನನ್ನ ಸ್ವದೇಶಿ ನನಗೆ ಕಲಿಸಿದೆ. ನನ್ನ ದೇಶಭಕ್ತಿ ಭಾರತಕ್ಕೆ ಮಾತ್ರ ಮೀಸಲಾದುದಲ್ಲ. ಬೇರೆ ಯಾವ ರಾಷ್ಟ್ರದ ಹಿತಕ್ಕೂ ಧಕ್ಕೆಯೊದಗಬಾರದು ಎಂಬುದಷ್ಟೇ ಅಲ್ಲ; ಸಕಲ ರಾಷ್ಟ್ರಗಳಿಗೂ, ಆ ಪದದ ಸಂಪೂರ್ಣಾರ್ಥದಲ್ಲಿ, ಸರ್ವಲಾಭ ಒದಗಬೇಕು ಎಂಬುದೇ ನನ್ನ ಮಾತಿನ ಆಶಯ. ನಾನು ಸಂಕಲ್ಪಿಸಿರುವ ಭಾರತದ ಸ್ವಾತಂತ್ರ್ಯ ಎಂದೆಂದೂ ಲೋಕಹಿತಕಂಟಕವಾಗಲಾರದು.

– ಮಹಾತ್ಮಾ ಗಾಂಧೀ

೧೨೩ ಒಪ್ಪಂದ ಮತ್ತು ಗಾಂಧೀ!

-ಸುರೇಂದ್ರ ಕೌಲಗಿ

ನಾವು ತಾಳ್ಮೆಯಿಂದ ಇದ್ದರೆ ಈ ನಾಗರೀಕತೆ ತನ್ನ ಬೆಂಕಿಗೆ ತಾನೇ ಸುಟ್ಟು ಬೂದಿಯಾಗುತ್ತದೆ.

-ಗಾಂಧೀ (ಹಿಂದ್ ಸ್ವರಾಜ್ಯದಲ್ಲಿ)

ಪೃಥ್ವಿ ಪೂರ್ವದಿಂದ ಪಶ್ಚಿಮಕ್ಕೆ ತಿರುಗುವಾಗಲೂ ಗಾಂಧೀ ವಿಚಾರ ಪ್ರಸ್ತುತ; ಅದೇ ಪೃಥ್ವಿ ಪಶ್ಚಿಮದಿಂದ ಪೂರ್ವಕ್ಕೆ ತಿರುಗಿದರೂ ಪ್ರಸ್ತುತ! ಈ ಮಾತು ಸಿದ್ಧವಾಗುವ ಯುಗ ಈಗ ಪ್ರಾರಂಭವಾಗಿದೆ. ೨೦೦೧ನೇ ಇಸ್ವಿಯಲ್ಲಿ ಅಮೇರಿಕಾ ಅಣು ಅಸ್ತ್ರ ಪ್ರಸರಣದ ಮೇಲೆ ವಿಧಿಸಿದ್ಧ ತನ್ನ ಮೂವತ್ತು ಮೂರು ವರ್ಷಗಳ ಸುದೀರ್ಘ ನಿರ್ಬಂಧವನ್ನು ತೆಗೆದು ಹಾಕಿತು. ಆ ಕೂಡಲೆ ಭಾರತದ ಬಾಯಲ್ಲಿ ಅಣುಶಕ್ತಿಯ ಉಪಯೋಗದ ಆಸೆಯ ಜೊಲ್ಲು ಸುರಿಯಲು ಪ್ರಾರಂಭವಾಯಿತು. ಅಭಿವೃಂದ್ಧಿಯೆಂಬ ಅಪ್ಸರೆ ದೇಶ ನಾಯಕರ ಕಣ್ಮುಂದೆ ಕುಣಿಯಲಾರಂಭಿಸಿದಳು. ಜೊತೆಗೆ ದೇಶದ ಆಡಳಿತ ಸೂತ್ರ ಹಿಡಿದಿರುವವರ ತಲೆಯೂ ತಿರುಗಲು ಪ್ರಾರಂಭಿಸಿತು. ದೇಶದ ಸ್ವಾತಂತ್ರ್ಯ, ಸ್ವರಾಜ್ಯ, ಪರಮಾಧಿಕಾರ ಮುಂತಾದ ವಿಚಾರಗಳ ವ್ಯಾಖ್ಯೆ ಬದಲಾಯಿತು, ಬುದ್ಧಿ ಮಂಕಾಯಿತು. ಭಾರತ ದೇಶ ತನ್ನ ಸ್ವಾತಂತ್ರ್ಯ ಕಳೆದುಕೊಂಡುದದರ ಇತಿಹಾಸ ಬೇರೊಂದು ರೂಪದಲ್ಲಿ ಪುನರ್ ರಚಿತವಾಗುತ್ತಿದೆಯೆಂಬ ತಿಳುವಳಿಕೆ ಮಾಯವಾಯಿತು. ಈಸ್ಟ್ ಇಂಡಿಯಾ ಕಂಪನಿ ಕಟ್ಟಿಕೊಂಡು ಬ್ರಿಟನ್ ವ್ಯಾಪಾರಕ್ಕಾಗಿ ಬಂದಿತು. ಆಗ ಭಾರತದಲ್ಲಿದ್ದ ಅನೈಕ್ಯತೆ, ಬಡತನ, ಮುಂತಾದವುಗಳ ಲಾಭಕ ಪಡೆದು ಭಾರತದಲ್ಲಿ ತನ್ನ ವಸಾಹತು ಸ್ಥಾಪಿಸಿತು. ಆ ವಸಾಹತುಶಾಹಿಯ ಕಹಿ ಜೀವನಾನುಭವದ ನೆನಪು ಇನ್ನೂ ಮಾಸದಿರುವ ಮುನ್ನವೇ, ರಾಷ್ಟ್ರ ಜೀವನದಲ್ಲಿ ಹೊಸ ಅಧ್ಯಾಯ ಪ್ರಾರಂಭವಾಗುವ ಮುನ್ನವೇ ಭಾರತ ಪುನಃ ವಸಾಹತುಶಾಹಿಗೆ ಒಳಪಡುತ್ತಿದೆ. ಆಗ ಬ್ರಿಟನ್ ಆಗಿದ್ದರೆ, ಈಗ ಅಮೇರಿಕಾ. ಆಗ ಹದಿನೆಂಟನೇ ಶತಮಾನದಲ್ಲಿ ಬ್ರಿಟನ್ ವಿಶ್ವದಲ್ಲಿ ಬಲಾಢ್ಯ ಸಾಮ್ರಾಜ್ಯವಾಗಿದ್ದರೆ, ಈಗ ಇಪ್ಪತ್ತೊಂದನೇ ಶತಮಾನದಲ್ಲಿ ಅಮೇರಿಕಾ ಬಲಾಢ್ಯವೂ, ಪ್ರಶ್ನಾತೀತವೂ ಆದ ಸಾಮ್ರಾಜ್ಯವಾಗಿ ಮೆರೆಯುತ್ತಿದೆ. ಬ್ರಿಟನ್ನಿನಂತೆಯೇ ಅಮೇರಿಕಾ ಕೂಡ ಈಗ ಭಾರತಕ್ಕೆ ವ್ಯಾಪಾರಕ್ಕಾಗಿಯೇ ಬಂದಿದೆ, ಹಣ ಸಂಪಾದನೆಗಾಗಿಯೇ ಬಂದಿದೆ, ಭಾರತದ ಪ್ರಕೃತಿ ಸಂಪತ್ತನ್ನೂ, ಮಾನವ ಸಂಪತ್ತನ್ನೂ ಲೂಟಿ ಮಾಡುವುದಕ್ಕಾಗಿಯೇ ಬಂದಿದೆ. ಭಾರತಕ್ಕೆ ರಾಜಕೀಯ ಏಳಿಗೆಯನ್ನು ತಂದು ಕೊಡುವ ನೆಪದಲ್ಲಿ ಇಂಗ್ಲೆಂಡ ಭಾರತವನ್ನು ತನ್ನ ಕಪಿಮುಷ್ಟಿಗೆ ತೆಗೆದುಕೊಂಡಂತೆ ಈಗ ಅಮೇರಿಕಾ ಆರ್ಥಿಕ ಏಳಿಗೆಯನ್ನು

ತಂದುಕೊಡುವ ನೆಪದಲ್ಲಿ ಅಭಿವೃದ್ಧಿಯೆಂಬ ಕಹಿಮಾತ್ರೆಗೆ ಡಾಲರ್ ಎಂಬ ಜೇನುತುಪ್ಪ ಸವರಿ ಭಾರತವನ್ನು ತನ್ನ ಆಕ್ಟೋಪಸ್ ಹಿಡಿತಕ್ಕೆ ತೆಗೆದುಕೊಳ್ಳುತ್ತಿದೆ. ಹತ್ತೊಂಭತ್ತನೇ ಶತಮಾನದ ವೇಳೆಗೆ ಜಗತ್ತಿನಲ್ಲೆಲ್ಲ ವಸಾಹತುಶಾಹಿ ಒಂದು ಪಿಡುಗಾಗಿ ಬಿಟ್ಟಿತ್ತು. ಜಗತ್ತು ಸೋತು ಬಿದ್ದಿತ್ತು. ಅಂಥ ಹತಾಶೆಯ ಕಾಲದ್ದಲ್ಲಿ ಗಾಂಧೀಜಿ ವಸಾಹತುಶಾಹಿಯ ವಿರುದ್ಧ ತಮ್ಮ ಸತ್ಯಾಗ್ರಹವೆಂಬ ಪಾಂಚಜನ್ಯವನ್ನು ಊದಿದದರು. ಆ ಶಂಖದ ಧ್ವನಿಗೆ ಇಂಗ್ಲೆಂಡ್ ವಿಚಲಿತಗೊಂಡು, ಭಾರತಕ್ಕೆ ಸ್ವಾತಂತ್ರ್ಯ ಕೊಟ್ಟು ಹಿಂಬಾಗಲಿನಿಂದ ಹೋದದ್ದೇ ತಡ ಮುಂಬಾಗಿಲಿನಿಂದ ಅಮೇರೀಕಾ ಪ್ರವೇಶ ಮಾಡಿತು. ತಾನು ಬರುವಾಗ ಅಣುಶಕ್ತಿಯನ್ನು ತಂದಿತು.ತಾನು ಈ ಸಂಬಧವಾಗಿ ರೂಪಿಸಿದ ಅಣು ಶಕ್ತಿ ಕಾಯಿದೆ ಸೆಕ್ಷನ್ ೧೨೩ರ ಮೂಲಕ ಭಾರತವನ್ನೂ, ಜಪಾನನ್ನೂ, ಚೀಣಾವನ್ನೂ ತನ್ನ ತೆಕ್ಕೆಗೆ ತೆಗೆದುಕೊಳ್ಳಲು ಪ್ರಾರಂಭಿಸಿತು. ರಶಿಯಾ ಛಿದ್ರವಾದದ್ದರಿಂದ ಅಮೇರಿಕಾದ ರೆಕ್ಕೆಪುಕ್ಕಗಳು ಬಲಿತವು. ಕುದುರೆಯೂ ತನ್ನದೇ, ಮೈದಾನವೂ ತನ್ನದೇ ಎಂಬ ಭಾವನೆಯನ್ನು ಬೆಳೆಸಿಕೊಂಡಿತು. ಆದರೆ ದೂರದಲ್ಲಿ ಚೀಣಾ ತನ್ನ ತಲೆ ಎತ್ತುತ್ತಿದೆ, ಏಶಿಯಾ ಖಂಡದಲ್ಲಿ ತನ್ನಗೆ ಸವಾಲೊಡ್ಡುವ ಸಿದ್ಧತೆ ಮಾಡಿಕೊಳ್ಳುತ್ತಿದೆ ಎಂಬ ಸುಳಿವು ಸಿಗುತ್ತಲೇ ಏಶಿಯಾ ಖಂಡದ ರಾಜಕೀಯ ಚದುರಂಗದಲ್ಲಿ ಭಾರತವನ್ನು ಒಂದು ಪ್ರಬಲ ಕಾಯನ್ನಾಗಿ ಉಪಯೋಗಿಸಲು ಅಮೇರಿಕಾ ತಿರ್ಮಾನಿಸಿತು. ಭಾರತ ಮತ್ತು ಚೀಣಾ ಅಣ್ಣತಮ್ಮದಿರಂಥ ಸಂಖ್ಯೆ ಬೆಳೆಸಿಕೊಳ್ಳಬಾರದೆಂಬ ಹುನ್ನಾರ ರೂಪಿಸಿತು. ಅಮೇರಿಕಾ ಭಾರತದ ಮನಸ್ಸಿನಲ್ಲಿ ಚೀಣಾ ಎಂಬ ಭೂತವನ್ನೂ ಸೃಷ್ಟಿಸಿತು.ಅದರ ಫಲವಾಗಿ ಭಾರತ ಚೀಣಾದೊಂದಿಗೆ ಎಲ್ಲ ಕ್ಷೇತ್ರಗಳಲ್ಲಿ ಪೈಪೋಟಿಗೆ ಇಳಿಯಿತು. ಭೌತಿಕ ಅಭಿವೃದ್ಧಿಗೆ ಎಲ್ಲಿಲ್ಲದ ಪ್ರಾಧಾನ್ಯತೆ ಕೊಟ್ಟಿತು. ಅಭಿವೃದ್ಧಿ ಸಾಧಿಸಬೇಕೆಂಬ ಭರಾಟೆಯಲ್ಲಿ ಚೀಣಾ ಅನುಸರಿಸಿದ ಹಾಗೂ ಮಾಡಿದ ತಪ್ಪುಗಳನ್ನು ಭಾರತ ಗಮನಿಸಲ್ಲೇ ಇಲ್ಲ . ಅಭಿವೃದ್ಧಿ ಸಾಧೀಸಲು ಎಂಥ ಪ್ರಕಾರದ ಮಾರ್ಗವನ್ನೂ ಅನುಸರಿಸಲು ಸಿದ್ಧವಾದ ಚೀಣಾ ಭಾರತಕ್ಕೆ ಗುರು ಆಯಿತು. ಭಾರತದ ಎಡ ಪಂಥೀಯರು ಎಂದಿನ ತಮ್ಮ ಜನ್ಮಜಾತ ಸ್ವಭಾವಕ್ಕನುಸಾರವಾಗಿ ತಮ್ಮ ನಿಷ್ಠೆಯನ್ನು ದೇಶದ ಗಡಿಯಾಚೇಗೆ ಚೀಣಾದೊಂದಿಗೆ ಗುರುತಿಸಿಕೊಂಡರು. ಇದುವರೆಗೆ ಚೀಣಾದಲ್ಲಿ ೮೭,೦೦೦ ಪ್ರತಿಭಟನಾ ರ್‍ಯಾಲಿಗಳಾಗಿವೆ. ಅವೆಲ್ಲವೂ ಚೀಣಾ ಅನುಸರಿಸುತ್ತಿರುವ ಅಭಿವೃಧಿಯ ನೀತಿಯ ವಿರುದ್ಧ ನಡೆದಂಥವು. ಕಳೆದ ಐವತ್ತು ವರ್ಷಗಳಲ್ಲಿ ಚೀಣಾದಲ್ಲಿ ಉಪಯುಕ್ತ ಭೂಮಿಯ ಅರ್ಧ ಭಾಗವನ್ನೇ ಕೈಗಾರಿಕೆಗಳು ಕಬಳಿಸಿವೆ.

ವಸ್ತು ಪರಿಸ್ಥಿತಿ ಹೀಗಿದ್ದರೂ ಕೂಡ ಭಾರತವು ಅಮೇರಿಕಾ ಕೊಡಲು ಮುಂದೆ ಬಂದಿರುವ ನ್ಯೂಕ್ಲಿಯರ್ ಅಣುಸ್ಥಾವರಗಳಾಗಿ ಯುರೇನಿಯಂನ್ನು ಅಗಾಧ ಪ್ರಮಾಣದ ಹಣವನ್ನು ಕೊಟ್ಟು ಖರೀದಿಸಲು ಸಿದ್ಧವಾಗಿದೆ

ದೇಶದ ಅಭಿವೃಧಿಗೆ ಶಕ್ತಿ ಬೇಕೆಂಬುದೇನೋ ನಿಜ. ಆದರೆ ಅತ್ಯಂತ ದುಬಾರಿಯ ಮತ್ತು ಅತ್ಯಂತ ಅಪಾಯಕಾರಿಯಾದ ಹಾಗೂ ಮುಂದೆ ಅಣ್ವಸ್ತ್ರಗಳ ತಯಾರಿಕೆಗೆ ಉಪಯೋಗವಾಗುವ ಸಾಧ್ಯತೆಯ ಅಣುಶಕ್ತಿ ಆಧಾರಿತ ಸ್ಥಾವರಗಳ ಸ್ಥಾಪನೆಗೆ ಭಾರತ ಸರ್ಕಾರ ಒಂಟಿಕಾಲಿನ ಮೇಲೆ ನಿಂತಿರುವುದು ಅತ್ಯಂತ ಕಳವಳಕಾರಿಯಾದ ಸಂಗತಿಯಾಗಿದೆ.ಅಣು ವಿದಳನ, ಅಣುಸಮ್ಮಿಳನಕಿಂತ ಬೇರೆಯಾಗಿದೆ. ಅಲ್ಲದೆ, ಬಹು ಅಪಾಯಕಾರಿಯಾಗಿದೆ. ಆದ್ದರಿಂದ ಅಣುಶಕ್ತಿಯನ್ನು ತೀವೃತಮವಾದ ವೈಜ್ಞಾನಿಕ ಪರಿಶೋಧನೆಯಿಲ್ಲದೆ ಅವಲಂಬಿಸುವ ನೀತಿಯನ್ನು ಕೈ ಬಿಡಬೇಕೆಂದು ತಜ್ಞರು ಹೇಳುತ್ತಿದ್ದಾರೆ. ಅಲ್ಲದೆ ನಮ್ಮ ದೇಶದ ಅಣುಶಕ್ತಿ ಆಯೋಗದ ಅಧ್ಯಕ್ಷರಾದ ಅನೀಲ ಕಾಕೋಡ್ಕರವರು ತುಂಬ ಇತ್ತೀಚೆಗೆ ವಿಯಾನಾದಲ್ಲಿ ನಡೆದ ಅಂತರರಾಷ್ಟ್ರೀಯ ಅಣುಶಕ್ತಿ ಏಜನ್ಸಿಗಳ ಸಮ್ಮೇಳನದಲ್ಲಿ ಹೀಗೆ ಹೇಳಿದ್ದಾರೆ, "ಅಣು ಸ್ಥಾವರಗಳಿಂದ ಬರುವ ನಿರಪಯುಕ್ತ ತ್ಯಾಜ್ಯವನ್ನು ಅತ್ಯಂತ ಸುರಕ್ಷಿತ ವ್ಯವಸ್ಥೆಯಲ್ಲಿ ಇಡಲಾಗುತ್ತಿದೆ. ಏಕೆಂದರೆ ಈ ತ್ಯಾಜ್ಯ ದಿಂದ ಪ್ಲುಟೋನಿಯಂ ತಯಾರಿಸಿ ಅಣುಅಸ್ತ್ರಗಳನ್ನು ತಯಾರಿಸಬಹುದಾಗಿದೆ. ಆದ್ದರಿಂದ ಭವಿಷ್ಯದಲ್ಲಿ ನಮ್ಮ ಸಂರಕ್ಷಣೆಯೊಂದಿಗೆ ಆಟವಾಡಲಾಗದು."

ಅಣುಶಕ್ತಿ ಸ್ಥಾವರಗಳಿಂದ ವಿದ್ಯುತ್ ಉತ್ಪಾದನೆ ಇನ್ನಿತರ ಎಲ್ಲ ಬಗೆಯ ತಂತ್ರಜ್ಞಾನಗಳಿಗಿಂತ ಅತಿ ದುಬಾರಿಯದಾಗಿದೆ. ನ್ಯೂಕ್ಲಿಯರ್ ವಿಕಿರಣದಿಂದಾಗಿ ಕ್ಯಾನ್ಸರ್ ಬರುತ್ತದೆ. ನಮ್ಮ ಮುಂದೆ ಚರ್ನೊಬಿಲ್ ಉದಾಹರಣೆ ಇದೆ. ಇದನ್ನು ತಿಳಿದೇ ಅಮೇರಿಕಾ ಸ್ವತಃ ತನ್ನ ವಿದ್ಯುತ್ ಉತ್ಪಾದನೆಯಲ್ಲಿ ಶೇಕಡಾ ೨೦ನ್ನು ಮಾತ್ರ ಅಣುಸ್ಥಾವರಗಳಿಂದ ಪಡೆಯುತ್ತಿದೆ.

ಅಣು ಅಣು ಸ್ಥಾವರಗಳ ಸ್ಥಾಪನೆಯ ನೆರವಿಗೆ ಅಮೇರಿಕಾ ಮುಂದೆ ಬಂದಿರುವುದು ಭಾರತದ ನಿಜವಾದ ಅಭಿವೃಧಿಯ ಹಿತದೃಷ್ಟಿಯಿಂದಲ್ಲ. ಅಣು ಸ್ಥಾವರಗಳ ಸ್ಥಾಪನೆಯ ಮೂಲಕ ತನ್ನ ದೇಶಗಳಲ್ಲಿಯ ಬೃಹತ್ ಕೈಗಾರಿಕಾ ಕಂಪನಿಗಳಿಗೆ ವ್ಯಾಪಾರದ ಅವಕಾಶವನ್ನು ಭಾರತದಲ್ಲಿ ಕಲ್ಪಿಸಿಕೊಂಡುವ ಸ್ವಾರ್ಥ ಭಾವನೆಯಿಂದ.

ಈಗ ಭಾರತ ಸರ್ಕಾರ ಸ್ಥಾವರಗಳನ್ನು ಸ್ಥಾಪಿಸಿ ಬಹುದೊಡ್ಡ ಪ್ರಮಾಣದ ವಿದ್ಯುತ್ ಉತ್ಪಾದನೆಗೆ ತೊಡಗಿರುವುದಕ್ಕೆ ದೇಶವಾಸಿಗಳೂ ಬಹಳಷ್ಟು ಕಾರಣವಾಗಿದ್ದಾರೆ. ಭಾರತೀಯರೆಲ್ಲ ಪಾಶ್ಚಿಮಾತ್ಯ ರೀತಿಯ ಜೀವನಶೈಲಿ,

ಕೈಗಾರಿಕಾ ಪದ್ಧತಿ, ಅಭಿವೃಧಿಯ ಪರಿಕಲ್ಪನೆಯನ್ನು ಅಪ್ಪಿಕೊಂಡಿದ್ದಾರೆ. ಪಾಶ್ಚಿಮಾತ್ಯ ಶೈಲಿಯ ಜೀವನಕ್ಕೆ ವಿದ್ಯುತ್ ಬೇಕೆ ಬೇಕು. ಜನತೆಗೆ ವಿದ್ಯುತ್ ಬೇಕಾಗಿರುವುದರಿಂದ ಅವನ್ನು ಪೂರೈಸಬೇಕಾದ ಜವಾಬ್ದಾರಿ ಸರ್ಕಾರದ್ದಾಗುತ್ತದೆ. ಪ್ರಜಾತಂತ್ರ ವ್ಯವಸ್ಥೆಯಲ್ಲಂತೂ ಇದು ಕಡ್ಡಾಯವಾಗುತ್ತದೆ.

ಇಂಥ ಬಿಕ್ಕಟ್ಟಿನ ಪರಿಸ್ಥಿತಿಯಲ್ಲಿಯೇ ನಮಗೆ ಗಾಂಧೀ ಅತ್ಯಂತ ಪ್ರಸ್ತುತವಾಗುತ್ತಾರೆ. ಅಭಿವೃದ್ಧಿಯನ್ನು ಭಾರತೀಯ ನೆಲೆಗಟ್ಟಿನ ಮೇಲೆ ರೂಪಿಸಬೇಕೆಂದು ಗಾಂಧೀಜಿ ಸ್ಪಷ್ಟವಾಗಿ ಹೇಳಿದ್ದಾರೆ. ಅಲ್ಲದೆ, ಪಾಶ್ಚಿಮಾತ್ಯರ ಎಲ್ಲ ನೀತಿಗಳೂ ದೋಷಪೂರ್ಣವೆಂದೂ, ಅನುಸರಿಸಲು ಅಯೋಗ್ಯವೆಂದೂ ಘಂಟಾಘೋಷವಾಗಿ ಹೇಳಿದ್ದಾರೆ. ೧೯೪೨ರಲ್ಲಿ ಇಂಗ್ಲೆಂಡಿನ ಶಕ್ತಿ ವಿರುದ್ಧ ಅವರು ಹೇಳಿದ ಮಾತನ್ನು ಗಮನಿಸ ಬೇಕು, “ನನ್ನನ್ನು ಹುಚ್ಚನೆಂದು ಕರೆದರೂ ಪರವಾಗಿಲ್ಲ. ನಾನು ಸತ್ಯ ಹೇಳಲೇ ಬೇಕು. ಭಾರತದಿಂದ ಇಂಗ್ಲಿಷ್ ರಾಜ್ಯಶಕ್ತಿ ಜರೂರಾಗಿ ಹೋಗಬೇಕು,” ಈಗ ಇದೇ ಮಾತು ಹೊಸ ವಸಾಹತು ಶಕ್ತಿಯಾಗಿ ಭಾರತಕ್ಕೆ ಬರುತ್ತಿರುವ ಅಮೇರಿಕಾಕ್ಕೂ ಅನ್ವಯಿಸುತ್ತದೆ.

ಗಾಂಧೀಯವರ ಈ ಇನ್ನೊಂದು ಮಾತು ಅಣುಬಂಧ ಒಪ್ಪಂದ ೧೨೩ರ ಸಂದಭದಲ್ಲಿ ಎಷ್ಟು ಪ್ರಸ್ತುತವಾಗಿದೆ ಎಂದು ನೋಡಬಹುದು, “ಬಲಹೀನರನ್ನು ರಕ್ಷಿಸುವ ನೆಪದಲ್ಲಿ ಇಬ್ಬರ ನಡುವೆ ಮೂರನೆಯ ಲಾಭ ಬಡಕ ಬೇಕಾಗಿಲ್ಲ ಈ ಸಂರಕ್ಷಣೆ ಎನ್ನುವುದೇ ನಮ್ಮನ್ನು ನಿಸ್ಸತ್ವ ಮಾಡಿದೆ. ಇಂಥ ಸಂರಕ್ಷಣೆ ನಿರ್ಬಲರನ್ನು ಮತ್ತಷ್ಟು ನಿರ್ಬಲರನ್ನಾಗಿ ಮಾಡುತ್ತದೆ. ಇದನ್ನು ಅರಿಯದಿದ್ದರೆ ನಮಗೆ ಸ್ವರಾಜ್ಯ ಸಿಗಲಾರದು.”

ಅಮೇರಿಕಾದೊಂದಿಗೆ ಭಾರತ ಮಾಡಿಕೊಳ್ಳಲಿರುವ ಅಣುಬಂಧ ೧೨೩ ಒಪ್ಪಂದ ಭಾರತಕ್ಕೆ ಖಂಡಿತವಾಗಿಯೂ ಯಮಪಾಶವಾಗುವುದು.

ಇಂದಿನ ಅಂತರರಾಷ್ಟ್ರೀಯ ರಾಜಕೀಯ ಬೆಳವಣಿಗೆಗಳನ್ನು ನೋಃಡಿದರೆ ಮತ್ತು ಜಗತ್ತಿನ ಎಲ್ಲ ರಾಷ್ಟ್ರಗಳು ಸಂಗ್ರಹಿಸುತ್ತಿರುವ ವಿಧ್ವಂಸಕ ಶಸ್ತ್ರಾಸ್ತ್ರಗಳ ಸಂಗ್ರಹವನ್ನು ನೋಡಿದರೆ, ಬಾಹ್ಯಾಕಾಶದಲ್ಲಿ ನಡೆಯುತ್ತಿರುವ ವೈಜ್ಞಾನಿಕ ಚಲನವಲನಗಳನ್ನು ಗಮನಿಸಿದರೆ ಹಾಗೂ ಎಲ್ಲೆಲ್ಲೂ ತಲೆಎತ್ತುತ್ತಿರುವ ಭಯೋತ್ಪಾದನಾ ಕೇಂದ್ರಗಳನ್ನು ದೃಷ್ಟಿಸಿದರೆ, ವಾಣಿಜ್ಯ ಪದಾರ್ಥಗಳ ಮೇಲೆ ಹಿಡಿತ ಸಾಧಿಸಲು ನಡೆಯುತ್ತಿರುವ ಪೈಪೋಟಿಯನ್ನು ಲೆಕ್ಕಿಸಿದರೆ ಮೂರನೇ ಮಾಹಾಯುದ್ಧದ ಬೀಜಗಳು ಬಿತ್ತಲ್ಪಡುತ್ತಿವೆ ಎಂದು ಅನಿಸದೇ ಇರದು. ಇಂಥ ಯುದ್ಧವೇನಾದರೂ ಸಂಭವಿಸಿದರೆ ಅಮೇರಿಕಾ ಭಾರತವನ್ನು ಮೂಂಚಣಿಯಲ್ಲಿಡುವುದರಲ್ಲಿ ಸಂದೇಹವಿಲ್ಲ. ಈಗಾಗಲೇ ಅಮೇರಿಕಾದ ಬಲಿಷ್ಟ ಯುದ್ಧನೌಕೆ ನಿಮಿಟ್ಜ್ ಹಿಂದೂಮಹಾಸಾಗರಕ್ಕೆ ಭೇಟಿಕೊಟ್ಟಿದೆ. ಅಮೇರಿಕಾದ

ಆರ್ಥಿಕ ಹಂಗಿನಲ್ಲಿ ಸಿಕ್ಕಿಹಾಕಿಕೊಂಡಿರುವ ಭಾರತ ಸ್ವಯಿಚ್ಛೆಯಿಲ್ಲದೆ ಬಲಿಪಶುವಾಗಬೇಕಾಗುತ್ತದೆ.

ಎರಡನೇ ಮಹಾ ಯುದ್ಧ ನಡೆದಾಗ ಬ್ರಿಟನ್ ಭಾರತವನ್ನು ಕೇಳದೆ ರಣಾಂಗಣಕ್ಕೆ ಏಳೆಯಿತು. ಬ್ರಿಟನ್ನಿನ ಈ ಕ್ರಮವನ್ನು ಗಾಂಧೀಜಿ ತಮ್ಮ ಸತ್ಯಾಗ್ರಹದ ಬಲದಿಂದ ವಿರೋಧಿಸಿದ್ದರು. ಯುದ್ಧದ ಸಮಯದಲ್ಲಿ ಗಾಂಧೀಜಿಯವರು ಇಂಗ್ಲಿಷರಿಗೂ, ಅಮೇರಿಕನ್ನರಿಗೂ, ಜಪಾನಿಯರಿಗೂ, ಮಾರ್ಶಲ್ ಚಿಯಾಂಗ್ ಕೈ ಶೇಕ್ ರವರಿಗೂ ಬಹಿರಂಗ ಪತ್ರ ಬರೆದು ಭಾರತದ ವಸ್ತ್ರಾಪಹರಣದ ವಿರುದ್ಧ ಸತ್ಯದ ಧ್ವನಿ ಪ್ರಪಂಚದಾದ್ಯಂತ ಪ್ರತಿಧ್ವನಿತವಾಗುವಂತೆ ಮಾಡಿದ್ದರು. ಬ್ರಿಟಿಷರು ತಮ್ಮ ಕೃತಿಗೆ ನಾಚಿಕೊಳ್ಳುವಂತೆ ಮಾಡಿದ್ದರು.

ಮೂರನೆ ಮಹಾಯುದ್ಧದ ಸಂದರ್ಭದಲ್ಲಿ ಅಮೇರಿಕಾದಿಂದ ಭಾರತಕ್ಕೆ ಆಗಬಹುದಾದ ಅನ್ಯಾಯದ ವಿರುದ್ಧ ಧ್ವನಿ ಎತ್ತಲು ಗಾಂಧೀಯಂಥ ವ್ಯಕ್ತಿ ಭಾರತದಲ್ಲಿ ಯಾರಿದ್ದಾರೆ?

ಭಾರತ ತಾನು ಕಷ್ಟ ಪಟ್ಟು ಗಳಿಸಿದ ಸ್ವಾತಂತ್ರ್ಯವನ್ನು ಕಳೆದುಕೊಳ್ಳುವುದು. ಅದು ಕೇವಲ ರಾಜಕೀಯ ಸ್ವಾತಂತ್ರ್ಯವಾಗಿರದೆ ಆರ್ಥಿಕ ಸ್ವಾತಂತ್ರ್ಯ ಮತ್ತು ಸಾಂಸ್ಕೃತಿಕ ಸ್ವಾತಂತ್ರ್ಯವನ್ನೂ ಕಳೆದುಕೊಳ್ಳುವುದು.

ಅಮೇರಿಕದ ಜೊತೆ ಭಾರತ ಮಾಡಿಕೊಳ್ಳಲಿರುವ ಅಣುಬಂಧದ ೧೨೩ ಒಪ್ಪಂದ ಜಾರಿಗೆ ಬರುವ ಮುನ್ನ ಭಾರತದ ಸ್ವಾತಂತ್ರ್ಯದ ಬಗ್ಗೆ ಕಾಳಜಿ ಇರುವರೆಲ್ಲ ಗಾಂಧೀಜಿ ೧೯೦೯ರಲ್ಲಿ ಬರೆದ "ಹಿಂದ್ ಸ್ವರಾಜ್ಯ" ಪುಸ್ತಕವನ್ನು ಖಂಡಿತವಾಗಿ ಓದಬೇಕು. ಭಾರತ ಚಂದ್ರಯಾನದ ಸಿದ್ಧತೆ ಮಾಡುತ್ತಿದ್ದರೂ ಸಹ ಅದು ಭೂಮಿಯ ಮೇಲಿನ ಮಾನವನ ಜೀವನವನ್ನು ಕಿಂಚಿತ್ತೂ ಬದಲಾಯಿಸಲಾರದು. ಈ ಮಾತಿನ ಅನುಭವ ಈಗಾಗಲೇ ಆಗಿದೆ. ಅಮೇರಿಕಾದವರು ಚಂದ್ರನನ್ನು ಮುಟ್ಟಿ ಬಂದಿದ್ದಾರೆ; ಮಂಗಳ ಲೋಕಕ್ಕೂ ಹೋಗುವ ಸಿದ್ಧತೆ ಮಾಡುತ್ತಿದ್ದಾರೆ. ಆದರೆ ಅದರಿಂದ ಭೂಮಿಯ ಮೇಲೆ ಇರುವ ಮಾನವನ ಪಾಶವೀ ಸ್ವಭಾವದಲ್ಲಿ ಕಿಂಚಿತ್ತಾದರೂ ಬದಲಾವಣೆ ಯಾಗಲೀ, ಸುಧಾರಣೆಯಾಗಲೀ ಆಗಿರುವ ಸೂಚನೆಗಳು ಕಂಡು ಬಂದಿಲ್ಲ. ವಿಜ್ಞಾನ ಮತ್ತು ತಂತ್ರಜ್ಞಾನ ಬೆಳೆದಂತೆಲ್ಲ ಮಾನವನ ಪಾಶವೀ ಶಕ್ತಿ ಹೆಚ್ಚಾಗುತ್ತಿದೆ, ಆಸುರೀ ಬುದ್ಧಿ ಬೆಳೆಯುತ್ತಿದೆ. ಇಂಥ ಸಂದರ್ಭದಲ್ಲಿ ಗಾಂಧೀಜಿ ತೊಂಬತ್ತೆಂಟು ವರ್ಷಗಳ ಹಿಂದೆ ಬರೆದ "ಹಿಂದ್ ಸ್ವರಾಜ್ಯ" ಪುಸ್ತಕದಲ್ಲಿಯ ವಿಚಾರಗಳು ಇಂದೂ ಪ್ರಸ್ತುತ.

* * *

ಸೂರ್ಯನೆಂಬ ಆದರ್ಶ ಸೇವಕ

- ವಿನೋಬಾ

ಸಂಸ್ಕೃತದಲ್ಲಿ ಸೂರ್ಯನಿಗೆ ಆದಿತ್ಯ ಎಂಬ ಒಂದು ಹೆಸರಿದೆ.ಆದಿತ್ಯ ೧೨ ತಿಂಗಳಿಗೆ ೧೨ ಇರುತ್ತವೆ. ಆದರೆ ಚಂದ್ರನ ಸುತ್ತುವಿಕೆಯ ಗತಿಯ ಅನುಸಾರವಾಗಿ ಮೂರು ವರ್ಷಗಳಿಗೊಮ್ಮೆ ಒಂದು ಅಧಿಕಮಾಸ ಬರುತ್ತದೆ ಅದನ್ನು ಪುರುಷೋತ್ತಮ ಮಾಸವೆಂದು ಕರೆಯುತ್ತಾರೆ ಒಂದೊಂದು ತಿಂಗಳಿಗೆ ಒಂದೊಂದು ಆದಿತ್ಯ ಮತ್ತು ಅಧಿಕ ಮಾಸಕ್ಕೆ ಆದಿತ್ಯ ವಿಭೂತಿ ವಿಷ್ಣು.

ಆಧಿಭೌತಿಕ, ಆಧಿದೈವಿಕ ಮತ್ತು ಅಂತರ್ಯಾಮಿ ಇವು ಉಪಾಸನೆಯ ತ್ರೈವಿಧ್ಯಗಳು. ಪ್ರತಿಯೊಂದು ವಸ್ತುವಿನಲ್ಲಿ ಇಂಥದೆ ಮೂರು ವಿಧಗಳಿವೆ ಉದಾಹರಣೆಗೆ :- ೧) ವೃಕ್ಷ-ಆಧಿಭೌತಿಕ, ೨) ವನಸ್ಪತಿ- ದೇವತೆ-ಅಧಿದೈವ, ೩) ಪರಮೇಶ್ವರ-ಅಂತರ್ಯಾಮಿ.

ನಮ್ಮ ನೆತ್ತಿಯ ಮೇಲೆ ಕಾಣುವ ಸೂರ್ಯ ಆಧಿಭೌತಿಕ. ಆದಿತ್ಯನ ಅಧಿದೈವತೆ ವಿಷ್ಣು. ಇದಕ್ಕೆ ಅತಿರಿಕ್ತವಾದ ಆದಿತ್ಯನ ಅಂತರ್ಯಾಮಿಯಾಗಿ ಪರಮೇಶ್ವರನಿದ್ದಾನೆ. ಒಂದೊಂದು ತಿಂಗಳಿಗೆ ಒಂದೊಂದು ದೇವತೆ. ಆದ್ದರಿಂದ ಆದಿತ್ಯನನ್ನು ಪ್ರತ್ಯೇಕವೆಂದು ತಿಳಿಯಲಾಗುತ್ತದೆ. ೧೨ ತಿಂಗಳುಗಳ ೧೨ ಆದಿತ್ಯಗಳ ರೂಪ ಸೌಮ್ಯ, ಪ್ರಖರ, ಆವೃತ. ಆವೃತ ಎಂದರೆ ಮುಚ್ಚಿರುವಂಥದು. ಚಾತುರ್ಮಾಸದಲ್ಲಿ ಮುಚ್ಚಿದಂಥ, ಚಳಿಗಾಲದಲ್ಲಿ ಸೌಮ್ಯ ಮತ್ತು ಬೇಸಿಗೆಯಲ್ಲಿ ಪ್ರಖರ, ಹೀಗೆ ಸೂರ್ಯನ ರೂಪಗಳು.

ಸಂಸ್ಕೃತದಲ್ಲಿ 'ದಾ' ಅಂದರೆ ಕೊಡುವುದು. ಇದಕ್ಕೆ ವಿರುದ್ಧವಾಗಿ 'ಆ_ದಾ ಅಂದರೆ ತೆಗೆದುಕೊಳ್ಳುವುದು. ಹೀಗೆ ಆದಿತ್ಯ ಶಬ್ದ ಆಗಿದೆ. ಇದನ್ನು ಶ್ರುತಿ ಹೇಳಿದೆ. ತದನುಸಾರ ಆದಿತ್ಯ ಅಂದರೆ 'ತೆಗೆದುಕೊಂಡು ಹೋಗುವವ.' ಆದಿತ್ಯ ಏನು ತೆಗೆದುಕೊಂಡು ಹೋಗುತ್ತಾನೆ? ಕವಿ ಹೇಳುತ್ತಾನೆ, "ನಿಮ್ಮ ಆಯುವಿನ ಒಂದು ತುಂಡನ್ನು." ಅಸ್ತವಾಗುವ ಸೂರ್ಯ ನಮ್ಮ ಆಯುವಿನ ಒಂದು ತುಂಡನ್ನು ತೆಗೆದುಕೊಂಡು ಹೋಗುತ್ತಾನೆ. ಇದು ನಮ್ಮ ಮನಸ್ಸಿಗೆ ನಿತ್ಯವು ಬರಬೇಕು.ಈ ಉದ್ದೇಶದಿಂದಲೆ ಸಂಧ್ಯಾದ ಮೂರು ವಿಧಗಳನ್ನು ಹೇಳಲಾಗಿದೆ. ವೇದದಲ್ಲಿ ಹೀಗಿದೆ-ಸತ್ಯನೆ ಉತ್ತಭೀತ ಭೂಮಿಹಿಃ ಸೂರ್ಯಣೊ ತ ಭಿತ ದ್ಯೆಃ (೧೦.೧೨.೧) ಭೂಮಿಯ ಆಧಾರ ಸತ್ಯ, ಸ್ವರ್ಗದ ಆಧಾರ ಸೂರ್ಯ. ಮೇಲೆ ಸೂರ್ಯ ಮತ್ತು ಕೆಳಗೆ ಸತ್ಯ ಆದ್ದರಿಂದ ಪ್ರಾತಃಕಾಲದ ಸಂಧ್ಯಾ ಮಾಡುವ ಸಮಯದಲ್ಲಿ ಹೀಗೆ ಹೇಳುತ್ತಾರೆ ಜ್ಯೋತಿಷಿ ಜ್ಯೂಹೋಮಿ ಸ್ವಾಹ-ನಾನು ಸೂರ್ಯರೂಪಿ. ಜ್ಯೋತಿಯ ಎದುರಿನಲ್ಲಿ ಆಹುತಿ ಕೊಡುತ್ತೇನೆ. ಮತ್ತು ಸಂಜೆಯ ಸಮಯದಲ್ಲಿ ಯಾರು ಸಂಧ್ಯಾ ಮಾಡುತ್ತಾರೊ ಆಗ ಸತ್ಯ ಜ್ಯೋತಿಷಿ ಜ್ಯೂಹೋಮಿ ಸ್ವಾಹ-ನಾನು ಸತ್ಯ ರೂಪಿ ಜ್ಯೋತಿಗೆ ಆಹುತಿ ಕೊಡುತ್ತೇನೆ ಎಂದು ಹೇಳುತ್ತಾರೆ. ಮೇಲೆ ಸೂರ್ಯ ಮತ್ತು ಕೆಳಗೆ ಸತ್ಯ. ಪೃಥ್ವಿಯನ್ನು ಗಟ್ಟಿಯಾಗಿ ಮಾಡುತ್ತದೆ ಸತ್ಯ.

ನಮ್ಮ ಹೃದಯದಲ್ಲಿರುವಂಥ ಆತ್ಮ ಕೂಡ ಸೂರ್ಯ. ಹೊರಗಿರುವ ಸೂರ್ಯನು ಕೂಡ ಆತ್ಮ. ಹೇಗೆ ಹೊರಗೆ ಸೂರ್ಯನ ಜ್ಯೋತಿಯಿದೆಯೊ ಹಾಗೆ ಒಳಗೆ ಸತ್ಯದ-ಜ್ಯೋತಿಯಿದೆ. ಆ ಎರಡು ಜ್ಯೋತಿಗಳ ಉಪಾಸನೆಯನ್ನು ನಮ್ಮ ಪೂರ್ವಜರು ಮಾಡುತ್ತಿದ್ದರು ಒಂದು ಕಡೆಗೆ ಸೂರ್ಯ-ಪ್ರತೀಕ ಮತ್ತು ಇನ್ನೊಂದೆಡೆ ಆತ್ಮ-ಪ್ರತೀಕ! ಇಂಥ ಭಾವನೆಯೊಂದಿಗೆ ಸೂರ್ಯೋಪಾಸನೆಯನ್ನು ಮಾಡಿದರೆ ಸತ್ಯದ ಪ್ರಾಪ್ತಿ ಸುಲಭವಾಗುತ್ತದೆ. ಹೊರಗೆ ಸೂರ್ಯನಾರಾಯಣನ ಉದಯವಾಗುವಂತೆ ಒಳಗೂ ಸಹ ಸೂರ್ಯನಾರಾಯಣನಿದ್ದಾನೆ. ಹೊರಗಿನ ಸೂರ್ಯ ಮೋಡಗಳಲ್ಲಿ ಮುಚ್ಚಿದ್ದರೆ ಅವನ ದರ್ಶನವಾಗುವುದಿಲ್ಲ. ಹಾಗೆಯೇ ಹೃದಯದ ಮೇಲೆ ತೆರೆಯಿದ್ದರೆ ಒಳಗಿನ ಜ್ಯೋತಿಯ ದರ್ಶನವಾಗುವುದಿಲ್ಲ. ಒಳಗಿನ ಸೂರ್ಯ ಅತ್ಯಂತ ಜ್ಯೋತಿರ್ಮಯ. ಹೊರಗಿನ ಸೂರ್ಯನಲ್ಲಿ ಸ್ವಯಂ ಭೂ ಪ್ರಕಾಶವಿರುವಂತೆ ಒಳಗಿನದರಲ್ಲಿ ಸ್ವಯಂ ಭೂ ಜ್ಞಾನ ಪ್ರಕಾಶವಿದೆ. ಉಪಾಸನೆ ಆತ್ಮ-ಸೂರ್ಯನದಾಗಿರುತ್ತದೆ. ಸೂರ್ಯನ ಮೇಲೆ ಕೂಡ ಆತ್ಮದ ಭಾವನೆಯನ್ನು ಇರಿಸಿಕೊಳ್ಳಬಹುದು. ಕುರಾನಿನಲ್ಲಿ ಒಂದು ಬಹು ಸುಂದರ ವಾಕ್ಯವಿದೆ. ಒಂದು ವೇಳೆ ನೀನು ಭಗವಂತನ ಪೂಜೆಯನ್ನು ಮಾಡಲು ಬಯಸುವುದಾದರೆ ಸೂರ್ಯ-ಚಂದ್ರನ ಪೂಜೆ ಮಾಡಬೇಡ ಬದಲಿಗೆ ಯಾರು ಸೂರ್ಯ ಮತ್ತು ಚಂದ್ರನಿಗೆ ಜನ್ಮ ಕೊಟ್ಟಿದ್ದಾರೊ ಅವನ ಪೂಜೆಯನ್ನು ಮಾಡು. ಇದರಲ್ಲಿ ಒಂದು ವಿಶೇಷ ಶ್ರದ್ಧೆ ಪ್ರಕಟವಾಗುತ್ತದೆ. ಸೂರ್ಯ, ಚಂದ್ರ ಇವೆಲ್ಲವನ್ನು ಪರಮೇಶ್ವರನು ಹುಟ್ಟಿಸಿದ್ದಾನೆ. ಇವೆಲ್ಲವು ಪರಮೇಶ್ವರನ ಅಂಶ ಮಾತ್ರ ಸೂರ್ಯನಾರಾಯಣನಲ್ಲಿ ಏನೊಂದು ವಿಷಯವಿದೆಯೊ ಅದನ್ನು ನಮ್ರನಾಗಿ ಧ್ಯಾನಿಸಬೇಕು. ಪರಮೇಶ್ವರನೆಂದು ತಿಳಿದು ಸೂರ್ಯನನ್ನು ಪೂಜಿಸಬೇಕು. ಅಂದರೆ ಕರ್ತನ ಉಪಾಸನೆ ಮಾಡಬೇಕು, ಕರ್ಮವನ್ನಲ್ಲ.

ಆದರೂ ಕುಡ ಸೂರ್ಯೋದಯವಾದಾಗ ಶರೀರದಲ್ಲಿ, ಇಂದ್ರಿಯಗಳಲ್ಲಿ, ಮನಸ್ಸು, ಬುದ್ಧಿಯಲ್ಲಿ ನಿಸ್ಸಂಶಯವಾಗಿ ಪ್ರಾಣ ಸಂಚಾರವಾಗುತ್ತದೆ. ಆದ್ದರಿಂದ ಸೂರ್ಯೋದಯದ ಸಮಯ ಬಹಳ ಮಹತ್ವದ್ದಾಗಿದೆ. ಸೂರ್ಯ-ದರ್ಶನ ಬಹು ಉತ್ಸಾಹದಾಯಕ ದರ್ಶನ. ಸೂರ್ಯ ಅಂದರೆ (ಸು+ಯಿರ್) ಉತ್ತಮ ಪ್ರೇರಣೆಯನ್ನು ಕೊಡುವಂಥವ.

ವೇದದಲ್ಲಿ ಒಂದು ಸಣ್ಣ ಮಂತ್ರವಿದೆ-ಸೂರ್ಯ ಆತ್ಮಾ ಜಗಸ್ತಸ್ಥು ಶ್ಚ-ಸೂರ್ಯ ಸಮಸ್ತ ಸ್ಥಾವರ-ಜಂಗಮದ ಆ ತ್ಮ. ಚರಾಚರದ ಆಧಾರ. ಋಷಿಯು ಅವನಿಗೆ 'ಮಿತ್ರ' ಎಂದು ಕರೆದಿದ್ದಾನೆ.- ಮಿತ್ರೋಜನಾನ್ ಯಾತಯತಿ ಬ್ರುವಾಣೊ ಮಿತ್ರೋ ದಾಧಾರ ಪೃಥಿವೀ ಮುತ ಧ್ಯಾಂ (೩.೬.೨) ಈ ಮಿತ್ರ ಜನರನ್ನು ಕರೆಯುತ್ತಾನೆ, ಅವರನ್ನು ಸೇವೆಯಲ್ಲಿ ತೊಡಗಿಸುತ್ತಾನೆ. ಅವನು ಸ್ವರ್ಗ ಮತ್ತು ಪೃಥ್ವಿ ಎರಡನ್ನೂ ಧಾರಣ ಮಾಡಿದ್ದಾನೆ.

ಸೂರ್ಯನಾರಾಯಣ ಬಂದ ಮೇಲೆ ಜನರು ಅತ್ಯಂತ ಉತ್ಸಾಹದೊಂದಿಗೆ ತಮ್ಮ ಬಾಗಿಲನ್ನು ತೆರೆಯುತ್ತಾರೆ. ಅವನ ಕಿರಣಗಳನ್ನು ತಮ್ಮ ಮನೆಯಲ್ಲಿ ತೆಗೆದುಕೊಳ್ಳಲು

ಅತ್ಯಂತ ಉತ್ಸುಕರಾಗಿರುತ್ತಾರೆ. ಮತ್ತು "ಗೆಳೆಯ ಬಂದ ಗೆಳೆಯ ಬಂದ" ಎಂದು ಹೇಳುತ್ತಾರೆ. ಈ ಸೂರ್ಯ ಪ್ರಜೆಗಳ ಪ್ರಾಣವನ್ನು ಜಾಗೃತಗೊಳಿಸುತ್ತಿದ್ದಾನೆ. -ಪ್ರಾಣಃ ಪ್ರಜಾನಾಂ ಉದಯತ್ತೆಶಃ ಸೂರ್ಯಃ- ಸೂರ್ಯನಿಗಾಗಿ ಜನರಲ್ಲಿ ಎಷ್ಟೊಂದು ವಿಶ್ವಾಸ, ಎಷ್ಟೊಂದು ಪ್ರೇಮ, ಎಷ್ಟೊಂದು ಭಕ್ತಿಯಿದೆ. ಇಷ್ಟೊಂದು ಮಹಾನ್ ಅವನಿದ್ದಾನೆ. ಆದರೆ ಸ್ವಭಾವ ಹೇಗಿದೆ? ಅವನ ಸ್ಥಾನ ಎಷ್ಟೊಂದು ಎತ್ತರವಾಗಿದೆ, ಆದರೆ ನಮ್ರತೆ ಎಷ್ಟಿದೆ? ಯಾರಾದರೂ ತಮ್ಮ ಬಾಗಿಲನ್ನು ಮುಚ್ಚಿದ್ದರೆ ಅವನು ತಾನಾಗಿಯೆ ತಳ್ಳಿ ಅದನ್ನು ತೆಗೆಯುವುದಿಲ್ಲ. ಬಾಗಿಲಲ್ಲೆ ಅವನು ತನ್ನ ಕಿರಣಗಳೊಂದಿಗೆ ನಿಂತಿರುತ್ತಾನೆ. ಎಲ್ಲಿಯವರೆಗೆ ಬಾಗಿಲನ್ನು ತೆಗೆಯುವುದಿಲ್ಲವೊ ಅಲ್ಲಿಯವರೆಗೆ ಅವನು ತಾನಾಗಿ ಒಳಗೆ ಬರುವುದಿಲ್ಲ. ಹಿಂದಿರುಗಿಯೂ ಹೋಗುವುದಿಲ್ಲ. ಬಾಗಿಲನ್ನು ಅರ್ಧ ತೆಗೆದಿದ್ದರೆ ಒಳಗೆ ಅರ್ಧ ಬರುವನು. ಪೂರ್ಣ ತೆಗೆದರೆ ಪೂರ್ಣ ಬರುವನು. ಈ ವೃತ್ತಿಯೆ ಸೇವಕನದಾಗಿರಬಹುದು. ಸೂರ್ಯನಾರಾಯಣ ಸೇವಕರ ಆದರ್ಶನಿದ್ದಾನೆ. ಹಳ್ಳಿ ಹಳ್ಳಿಗಳಲ್ಲಿ ಜನರು ಎಷ್ಟೊಂದು ಹೊಲಸು ಮಾಡುತ್ತಾರೆ.ಆದರೆ ಸೂರ್ಯನಾರಾಯಣ ಅದರ ಮೇಲೆ ತನ್ನ ಕಿರಣಗಳನ್ನು ಹಾಕಿ ದುರ್ವಾಸನೆಯನ್ನು ತೆಗೆದುಹಾಕುತ್ತಾನೆ. ಆದ್ದರಿಂದ ಹೊಲಸಿದ್ದರೂ ಕೂಡ ಜನರು ಜೀವಂತವಾಗಿರುತ್ತಾರೆ. ಸೂರ್ಯದೇವರು ನಿತ್ಯ ಭಂಗಿಯಾಗಿ ನಮ್ಮನ್ನು ಉಳಿಸಿಕೊಳ್ಳುತ್ತಾನೆ. ನಾವು ಆ ಹೊಲಸಿನ ಮೇಲೆ ಮಣ್ಣು ಹಾಕಿದರಂತೂ ಸೂರ್ಯನಾರಾಯಣ ಅದನ್ನು ಚಿನ್ನವನ್ನಾಗಿ ಮಾಡುತ್ತಾನೆ ಆ ಹೊಲಸಿನಿಂದ ಉತ್ತಮ ಗೊಬ್ಬರ ತಯಾರಿಸಿ ಜನರಿಗೆ ಕೊಡುತ್ತಾನೆ. ಈ ರೀತಿ ಅವನು ನಿರಂತರ ಸೇವೆ ಮಾಡುತ್ತಾನೆ. ಸೇವೆ ಮಾಡುತ್ತಿದ್ದರೂ ಅತ್ಯಂತ ನಮ್ರನಿದ್ದಾನೆ. ಎಲ್ಲರಿಗೂ ಇವನು ಗೆಳೆಯನೆಂದೆನಿಸುತ್ತದೆ. ವೇದದಲ್ಲಿ ಅವನ ಬಗ್ಗೆ ಆಶ್ಚರ್ಯಕರ ಮಹಿಮೆಯನ್ನು ಹಾಡಲಾಗಿದೆ- ಮಾಮ್ ಪ್ರತಿ ಮಮ್ ಪ್ರತಿ ಇತಿ ಸರ್ವೇಣಾ ಸಮಮ್-ಇದನ್ನು ನನಗಾಗಿಯೆ ಹಾಡಲಾಗಿದಿಯೊ ಎಂಬಂತೆನಿಸುತ್ತದೆ. ಅವನು ಎಲ್ಲರಿಗೂ ಸಮಾನವಾಗಿದ್ದಾನೆ. ಯಾರಾದರೂ ಎಂದಾದರೂ ಸೂರ್ಯ ನನ್ನ ಆಸ್ತಿ ಎಂದು ಹೇಳಬಲ್ಲರೆ. ಭಗವನ್ ರಾಮಚಂದ್ರ ದೊಡ್ಡವರಾಗಿರುವುದರ ಜೊತೆಗೆ ಸೂರ್ಯವಂಶಿಯೂ ಆಗಿದ್ದರು. ಅದರೆ ಸೂರ್ಯನು ರಾಮನ ಎಷ್ಟು ಒಡೆತನಕ್ಕೆ ಸೇರಿದ್ದನು ಅಷ್ಟೆ ರಾವಣನ ಒಡೆತನಕ್ಕೂ ಸೇರಿದ್ದ. ಎಲ್ಲರನ್ನು ಸಮಾನವಾಗಿ ಪ್ರೀತಿಸುತ್ತಾನೆ ಎಂಬುದೇ ಸೂರ್ಯನ ವಿಶೇಷತೆ.

ಪ್ರಾಚೀನ ಕಾಲದಲ್ಲಿ ಸೂರ್ಯನ ಕಡೆಗೆ ಅಭಿಮುಖರಾಗಿ ಜನರು ಪ್ರಾರ್ಥನೆ ಮಾಡುತ್ತಿದ್ದರು. ಸೂರ್ಯ ಬಹಳ ದೊಡ್ಡ ಸ್ಫೂರ್ತಿಯ ಸ್ಥಾನ. ಅವನು ಈಶ್ವರ ಪ್ರತೀಕ ಎಂದು ತಿಳಿದು ಉಪಾಸನೆ ಮಾಡುವುದು ಒಳ್ಳೆಯದು. ನಿಜವಾಗಿಯೂ ಸೂರ್ಯ ಜೀವನದ ಅಧಾರವಿದ್ದಾನೆ. ಅವನಲ್ಲಿ ಪರಮಾತ್ಮನ ದರ್ಶನ ಮಾಡಬೇಕು.

(ಮುಂದುವರಿಯುವುದು)

ಈ ಭೂಮಿ ಎಂಬುದೇ ಮಹಾಬೀಜ

– ಕೃಷ್ಣಮೂರ್ತಿ ಬಿಳಿಗೆರೆ

ಈ ಭೂಮಿ ಹುಟ್ಟುವಾಗಲೇ ಬೀಜಗಳ ಹಾಡು ಹುಟ್ಟಿರಬೇಕು. ಲಾವಾರೂಪದ, ಅನಿಲ ರೂಪದ, ಜಲರೂಪದ ಬೀಜಗಳು ಘನಗೊಂಡು ಬಣ್ಣ ಬಣ್ಣದ ಜೀವಗಳಾಗಿ, ಗಿಡಮರ ಬಳ್ಳಿಗಾಗಿ ಸೂರ್ಯನ ಶಿಶು ಮಕ್ಕಳಾಗಿ ಈ ಲೋಕದ ತುಂಬಾ ಹಬ್ಬಿ ಬೆಳೆದಿರಬೇಕು. ಆಯಾಯ ಮಣ್ಣಿನ ಬಣ್ಣಕ್ಕೆ ಅನುಗುಣವಾಗಿ ರುಚಿ ಪಡೆದಿರಬೇಕು. ಬೆಟ್ಟದ ಮೇಲೊಂದು ಬಗೆ, ಹಳ್ಳಕೊಳ್ಳದಲ್ಲಿ ಇನ್ನೊಂದು ಬಗೆ. ಸಮುದ್ರದ ಸಂಗದಲ್ಲಿ, ಕಾಡಿನ ಕತ್ತಲಲ್ಲಿ ನಿರಂತರ ಜೀವಗಳು ಪಸರಿಸತೊಡಗಿ ಕೊನೆಯಿರದ ಪಯಣ ಆರಂಭಿಸಿದಾಗ ಮನುಷ್ಯ ಬೀಜವೆಂಬುದು ಅವುಗಳ ಒಳಗೆಲ್ಲೋ ಅಡಗಿ ಕಾಯುತ್ತಿದ್ದಿರಬೇಕು.

ಸೂರ್ಯ ತೇಜದ ಸುತ್ತ ಸುತ್ತುವ ಕಾಯಗಳಲ್ಲಿ ಭೂಮಿ ಎಂಬುದೊಂದೇ ಸದ್ಯಕ್ಕೆ ಹುಟ್ಟುವ ಬೀಜ. ಮಿಕ್ಕವು ಮೊಳಕೆಯೊಡೆಯದ ಬೀಜಗಳು. ಈ ಭೂಮಿ ಎಂಬ ಬೀಜದೊಳಗೆ ಎಷ್ಟು ಬೀಜಗಳಿರಬಹುದು! ಗಿಡ, ಮರ, ಬಳ್ಳಿ, ಬೀಜ, ಪ್ರಾಣಿಪಕ್ಷಿ, ಕ್ರಿಮಿಕೀಟಗಳ ಬೀಜ. ಅವೆಲ್ಲವನ್ನು ಒಂದೆಡೆ ಹಾಕಿ ಬಿತ್ತಿ ಬೆಳೆಯುವ ಕನಸು ಅದ್ಭುತವಾದುದು. ಆದರೆ ಈ ಕಲ್ಪನೆಯ ನಡುವೆ ಜೀನ್ ಬ್ಯಾಂಕ್, ಸೀಡ್ ಬ್ಯಾಂಕ್ ಹೆಸರಿನಲ್ಲಿ 'ಬೀಜ ಬಂಧನ'ಸಾಕಾರಗೊಂಡಿರುವುದು ಇಂದಿನ ವಾಸ್ತವ. ಅನಾದಿ ಕಾಲದಿಂದಲೂ ಈ ನೆಲದೊಡಲು ಮೋಡದಿಂದ ಪಲ್ಲವಿಸುತ್ತಿದ್ದ ಬೀಜಮಳೆಯನ್ನು ರೈತಕಾರ್ಮಿಕರ ಕೈಯಿಂದ ಅಪಹರಿಸಿ ಬಚ್ಚಿಟ್ಟು ನಿರ್ಗತಿಕರಾಗಿಸುವ ತನ್ಮೂಲಕ ತಮ್ಮ ಮಾತನ್ನು ಮಾತ್ರ ಕೇಳುವ ಷಂಡ ಬೀಜಗಳನ್ನು ಬೀಜದೇವರ ಸ್ಥಾನದಲ್ಲಿ ಪ್ರತಿಷ್ಠಾಪಿಸುತ್ತಿರುವುದು ಬಟಾಬಯಲಾಗಿರುವ ಭಯಂಕರ ಸತ್ಯ.

ಬೀಜವೆಂದರೆ ಸೀಳಿ ಹುಟ್ಟುವ ಹಸಿರು ಬೆಳಕು. ಎರಡೆಲೆಯ ಬ್ರಹ್ಮಾಂಡ ಬೆದೆ. ಇಂಥ ಹಸಿರು ಬೆಳಕಿನ ಬಳ್ಳಿಯಿಂದ ಕೆಂಪು, ಬಿಳಿ, ಹಳದಿ, ನೀಲಿ ಇತ್ಯಾದಿ ಕಣ್ಣರಿಯದ ಹಲವು ಬಣ್ಣಗಳ ಹೂವುಗಳು, ಕಾಯಿಗಳು ಮತ್ತು ಬೀಜಗಳು. ಭೂಮಿ ಎಂಬುದು ಬೀಜ ಎಂದು ಒಪ್ಪುವುದಾದರೆ ಬೀಜವೇ ಮೊದಲು ಎಂದು ಬೀಜವೃಕ್ಷ ನ್ಯಾಯದ ವಿವಾದಕ್ಕೆ ತೆರೆ ಎಳೆಯಬಹುದು.

ನಾಲ್ಕಾರು ವರ್ಷಗಳು ಒಣ ಕೆರೆಯ ಗೋಡು ಬೀಟಿಯ ನಡುವೆ ಹಗಲು ರಾತ್ರಿಗಳನ್ನೆ ಕುಡಿದು ಬದುಕಿ, ಕೆರೆಗೆ ನೀರು ತುಂಬಿದ ಹೊತ್ತಲ್ಲಿ ಮಹಾಪ್ರಸಾದವೆಂಬಂತೆ ಅದರೊಳಗೆ ಬೆರೆತು ಒಡ ಮೂಡುವ ಮೀನ ಮೊಟ್ಟೆಯಂತೇ ಈ ಬೀಜಗಳದ್ದೂ ಕಾಯ್ದು ಹುಟ್ಟುವ ಹುಟ್ಟು. 'ಹುಟ್ಟು' ವಿಸ್ತರಿಸುವ ಮಹಾಕಾವ್ಯ. ಬೀಜಗಳೆಂದೂ ಸಿಡಿಯುತ್ತಾ ಮೊಳಕೆಯೊಡೆಯುವುದಿಲ್ಲ.

ಮಹಾಮೌನದ ಸ್ಫೋಟ. ಆದರೆ ಅದರ ಪ್ರಖರ ಮೊಳಕೆಯ ಬೆಳಕು ಇಡೀ ಭೂಮಿಯನ್ನೇ ಮೇಲೆತ್ತಿ ನಿಲ್ಲುವಷ್ಟು ಶಕ್ತಿಶಾಲಿ. ನೆಲ ಅರುಗಾಗಿ ಮೊಳಕೆಯ ಬೆಳಕಿಗೆ ದಾರಿ ಬಿಡಬೇಕು. ಸೀಳು ನೋಟ ಬೀರಿದ ಬೀಜ ಹೋಳಾಗಿ ಮೇಲ ಮೇಲಕ್ಕೂ ಆಳ ಆಳಕ್ಕೂ ಇಮ್ಮುಖವಾಗಿ ಬೆಳೆವ ಈ ಬೀಜದ್ದು ಒಂದೇ ಮಂತ್ರ, ಅದು ಹುಟ್ಟಿನ ಮಂತ್ರ. ಇದು ಆಕಾಶಕ್ಕೂ ಬೇರು ಬಿಡುವ ಮಾಯಾಶಕ್ತಿಯದು. ಹಸಿರು ಎಲೆಗಳು, ಕೊಂಬೆ ರೆಂಬೆಗಳೆಲ್ಲಾ ಸೂರ್ಯ ಪ್ರೇಮಿ ಬೇರುಗಳೇ ತಾನೆ.

ಕನಸುಗಳಿಗೆ ಬೀಜಗಳೇ ಬೇಕಿಲ್ಲ. ಅವು ಏನಿದ್ದರೂ ಬೀಜವ ಪಕ್ಕದಲ್ಲಿರಿಸಿ ಕತ್ತಲನ್ನೆ ಅಡುವು ಮಾಡಿಕೊಂಡು ಮಟ್ಟಿ ಬೆಳೆಯುತ್ತವೆ. ಹೀಗೆ ಕೆಲ ಜಾತಿಯ ಗಿಡಗಳಿಗೆ ವಿಸ್ತಾರಗೊಳ್ಳಲು ಬೀಜಗಳು ಬೇಕೇ ಬೇಕೆಂಬ ನಿಯಮವಿಲ್ಲ. ಗೆಡ್ಡೆ, ಗೆಣಸು, ಕಡ್ಡಿ, ಎಲೆ, ಬೇರು ಇತ್ಯಾದಿ ರೂಪಗಳಲ್ಲಿ ಚೆಲ್ಲಿಕೊಳ್ಳುತ್ತವೆ. ಚೆಲ್ಲಾಡಿ ಕೊಂಡಂತಿರುವ ಈ ಲೋಕವನ್ನು ಬಗೆ ಮಾಡಿ ನೋಡುತ್ತಾ ಹೋದರೆ ಬೀಜವೆಂದರೆ ಕೇವಲ ಬೀಜವಲ್ಲ ಅದು ಹಬ್ಬುವ ಬಳ್ಳಿ ಎಂಬುದು ತಿಳಿಯುತ್ತದೆ.

ಈ ಬೀಜಗಳು ತನ್ನ ಅಸ್ತಿತ್ವದ ಸ್ಥಾಪನೆಗಾಗಿ ಸಿಡಿಯುತ್ತವೆ. ಹಾರುತ್ತವೆ, ಪ್ರಾಣಿ ಪಕ್ಷಿಗಳ ಹೊಟ್ಟೆಯೊಳಗೆ ಅಪಾಯ ಲೆಕ್ಕಿಸದೆ ಕೂತು ಬದುಕಿ ಬಚಾವಾಗಿ ನೆಲದ ಸ್ಪರ್ಶಕ್ಕೆ ಬಂದು ಮಳೆಯ ಬರವಿಗಾಗಿ ಕಾಯುತ್ತವೆ.

ಹಣ್ಣಿನ ಬಣ್ಣಗಳೆಲ್ಲಾ ಕೆಂಪಾದರೆ, ಹೂವಿನ ಬಣ್ಣಗಳದ್ದು ತರಾವರಿ. ಮಣ್ಣು ಹಿಂಡಿ ಆಳದಿಂದ ಎತ್ತಿ ತಂದ, ಮೇಲೆ ಸೂರ್ಯನಿಂದ ಹೀರಿ ಪಡಕೊಂಡ ಬಣ್ಣಗಳವು. ಇಂಥ ಬಣ್ಣಗಳ ಒಳಹೊಕ್ಕು ತಮ್ಮ ಬಣ್ಣಗಳನ್ನು ಸವರಿ ಜೀವ ಕೊಟ್ಟು ಜೀವರಸ ಹೊತ್ತು ಎತ್ತಲೋ ಹಾರುತ್ತವೆ. ಬಣ್ಣದೊಳಗೆ ಅದ್ದಿದಂಥ ಬಣ್ಣ ಬಣ್ಣದ ಕೀಟಗಳು. ಹೂವು ಬಸಿರಾಗಿ, ಹೀಚಾಗಿ, ಕಾಯಾಗಿ ಹಣ್ಣಾದಾಗ ಬಣ್ಣಗಳದ್ದೆ ಕಾರುಬಾರು, ಹಣ್ಣುಗಳ ಹುಡುಕಿ ಬರುತ್ತವೆ, ಬಣ್ಣ ಬಣ್ಣದ ಹಕ್ಕಿಗಳು, ಮರಕ್ಕೂ ಇದೇ ಬೇಕು. ಕೊಕ್ಕಿನಲ್ಲಿ ನಚ್ಚಗೆ ಕಚ್ಚುತ್ತವೆ. ಇದು ಮರಕ್ಕೆ ಕಚಗುಳಿ, ರೋಮಾಂಚನ, ಮರುಕ್ಷಣ ಮರವೆಲ್ಲೋ, ಹಕ್ಕಿಯೆಲ್ಲೋ, ಹಣ್ಣೆಲ್ಲೋ, ಹಣ್ಣಿನೊಳಗಿನ ಬೀಜಗಳು ಎಲ್ಲೆಲ್ಲೊ.

ನಾವು ಹಾಗೆ ಹಾಗೆ ಕಾಲದ ಹಾದಿಯ ಹಿಂದು ಹಿಂದಕ್ಕೆ ಹೋದರೆ ಅಲ್ಲಿ ಬೀಜದ ಹಾದಿಯೂ ಕಾಣುತ್ತದೆ. ಅದಕ್ಕೆ ಆದಿಯೆಂಬುದಿಲ್ಲವೆನ್ನುವುದು ಬಹುಬೇಗ ಅರಿವಾಗುತ್ತದೆ. ಎಲ್ಲಿಂದ ಆರಂಭ ಗೊತ್ತಿಲ್ಲ. ಇಲ್ಲಿಯವರೆಗೆ ಬಂದಿದೆ. ಬರುವ ಹಾದಿಯಲ್ಲಿ ಎಷ್ಟು ಬೀಜಗಳು ಸುಟ್ಟು ಹೋದವೋ, ಕೊಚ್ಚಿ ಹೋದವೋ, ಹುಳಿತು, ಕೊಳೆತು ಹೋದವೋ ಯಾರಿಗೆ ಗೊತ್ತು. ಅದು ಪ್ರಕೃತಿ ಆಡುವ ಬೀಜದ ಆಟ. ಪ್ರಕೃತಿಯ ಆಟಕ್ಕೆ ಆದ್ಯತೆಯಿದ್ದ ಕಾಲ ಹೋಗಿ ಪ್ರಕೃತಿಯ ಒಂದು 'ಹುಳ' ಮನುಷ್ಯ ಆಡುವ ಆಟ ಇದೀಗ ತಾರಕ ಮುಟ್ಟಿದೆ. ಅದರ ಫಲ ಎಲ್ಲೆಲ್ಲೂ ಮನುಷ್ಯ ಬೀಜದ ತಿಪ್ಪೆಗಳು! (ತಿಪ್ಪೆಗಳನ್ನೆ ಊರು, ಪಟ್ಟಣ, ನಗರ

ಇತ್ಯಾದಿಯಾಗಿ ಕರೆಯುತ್ತಾರೆ) ಬೀಜದ ಸಹಜ ದಾರಿ ತಪ್ಪಿದ್ದರಿಂದ ಸೃಷ್ಟಿಯಾಗಿರುವುದೇ ಏಕರೂಪಿ ಬೀಜಗಳ ಭರಾಟೆ. ಕೋಟಿ ವೈವಿಧ್ಯಕ್ಕೆ ಬದಲು ಒಂದೇ ಬೀಜ, ಒಂದೇ ಗುಣ, ಒಂದೇ ರುಚಿಯ ನಿಜ ಬೀಜಗಳ ಕೊಂದು ರೂಪಿಸಿದ ಒಂಟಿ ಬೀಜ. ಎಲ್ಲಾ ಹಣ್ಣು, ತರಕಾರಿ, ದವಸ ಧಾನ್ಯಗಳಲ್ಲಿಯೂ ಈಗ ಉಳಿದಿರುವುದು ಅನೇಕಾನೇಕ ಹೆಸರುಳ್ಳ ಒಂದೇ ಬೀಜ. ಅದಕ್ಕೆ ರುಚಿಯಿಲ್ಲ, ಅನನ್ಯತೆಯಿಲ್ಲ, ತಾಳಿಕೆ ಇಲ್ಲ, ಬಾಳಿಕೆ ಇಲ್ಲ ಮತ್ತು ಹುಟ್ಟುವ ಗುಣವೆ ಇಲ್ಲ. ಇದನ್ನು ಬೀಜ ಎನ್ನಬೇಕೊ, ಖೋಜ ಎನ್ನಬೇಕೋ ತಿಳಿಯುತ್ತಿಲ್ಲ. ಈ ಬೀಜಕ್ಕೆ ಬರಗಾಲ ಗೆಲ್ಲುವ ಛಾತಿ ಇಲ್ಲ. ಕೀಟ, ರೋಗಗಳಿಂದ ಬಚಾವಾಗುವ ಸ್ವಂತಿಕೆ ಇಲ್ಲ. ನೆಲದ ಬೆಂಬಲವಿಲ್ಲ. ಈ ಬಗೆಯ ಬೀಜಮೂಲದ 'ಅನ್ನ' ಉಂಡವರು, ಉಣ್ಣುತ್ತಿರುವವರೂ ಬೀಜವಿಲ್ಲದ ಸ್ಥಿತಿಗೆ ತಲುಪುತ್ತಿದ್ದಾರೆ. ಈ ಕೃತಕ ಬೀಜದ ಜಾಲ ಬೀಸಿರುವ ಬಲೆ, ಅತಳವಿತಳಪಾತಾಳಗಳನ್ನೆಲ್ಲಾ ಆವರಿಸಿ ಆಳುತ್ತಿದೆ. ಇಂಥ ಹೊತ್ತಿನಲ್ಲೇ ಮೂಲ ಬೀಜಗಳ ಬಳಕು ಉಳಿಸುವ ಪ್ರಯತ್ನಗಳು ಜಗತ್ತಿನಾದ್ಯಂತ ಆರಂಭವಾಗಿವೆ. ಆಸೆ ಚಿಗುರೊಡೆಯುತ್ತಿದೆ.

ಕಾಲ ಸರಿದಂತೆ ನಮ್ಮವೇ ಚೆನ್ನದಂಥ ನೆನಪುಗಳು ಮಾಸುತ್ತವೆ, ಯಾಮಾರಿದರೆ ಮಾಯವಾಗುತ್ತವೆ ಕೂಡ. ವೈಯಕ್ತಿಕ ನೆನಪುಗಳು ಮಾಸಿದರೆ ಮಾಯವಾದರೆ ನಡೆಯುತ್ತದೆ. ಆದರೆ ಸಮುದಾಯದ ನೆನಪುಗಳು ಮಾಸಿದರೆ ಮಾಯವಾದರೆ ತೀರಾ ಅಪಾಯ. ಈಗ ಆಗಿರುವುದು ಅದೇ. ಜನಸಮುದಾಯಗಳು ಸಾವಿರಾರು ವರ್ಷಗಳಿಂದ ಅನ್ವೇಷಿಸಿದ, ಕೃಷಿ ವಿಧಾನಗಳು, ಆಹಾರ ಪದ್ಧತಿಗಳು, ಬೀಜ ರಕ್ಷಣಾ ಪದ್ಧತಿಗಳು, ಆರೋಗ್ಯ ಆಚರಣೆಗಳು ಇದ್ದಕ್ಕಿದ್ದಂತೆ ಹಲ್ಲೆಗೊಳಗಾದರೆ, ಮಾಯವಾದರೆ ಇದಕ್ಕೇನು ಹೇಳುವುದು.

ಅಣು ಬೀಜಗಳನ್ನು ತಯಾರಿಸಿ ಇತರರ ಹೊಟ್ಟೆಯೊಳಗೆ ಇಟ್ಟು ಆ ಸ್ಫೋಟಕ್ಕಾಗಿ ಕಾಯುವ ಅಮೆರಿಕಾ ಒಂದೆಡೆಯಾದರೆ ಅಂಬೇಡ್ಕರ್, ಬುದ್ಧ, ಕಬೀರ, ರಾಬಿಯಾ, ರಾಜೇಂದ್ರಸಿಂಗ್, ಬಸವಣ್ಣ, ಅನಿಲ್ ಅಗರ್‌ವಾಲ, ಶರೀಫ, ಮಂಟೇಸ್ವಾಮಿ, ಅಣ್ಣಾ ಹಜಾರೆ, ಗಾಂಧೀ ಮುಂತಾದವರು, ಸಮುದಾಯದೊಳಗಿನ ಕೇಡಾಳರು ಉತ್ಪಾದಿಸುವ ಮುಳ್ಳು ಬೀಜಗಳನ್ನು, ತಮ್ಮ ಹೊಟ್ಟೆಯೊಳಗೆ ಕರಗಿಸಿ ಇಲ್ಲವಾಗಿಸುವ ಪ್ರಯತ್ನ ಮಾಡುತ್ತಲೇ ಇರುತ್ತಾರೆ. ಆದರೀಗ ಆಸ್ಫೋಟದ ಬೀಜಗಳು ಮೇಲುಗೈ ಸಾಧಿಸುತ್ತಿರುವಂತೆ ಕಾಣುತ್ತಿದೆ.

ಎಲ್ಲದಕ್ಕೂ ಬೀಜವೇ ಮಂತ್ರ ಎಂಬುದನ್ನು ಎಲ್ಲರೂ ಒಪ್ಪುತ್ತಾರೆ. ಆದರೆ ನಮ್ಮ ಬೀಜಗಳ ಮೇಲೆ ದಾಳಿ ನಡೆದಾಗ ಎದೆಯೊಡ್ಡುವವರು ಯಾರು ಇಲ್ಲ. ಬೀಜ ದಾಳಿಯನ್ನು ಎದುರಿಸಲು ರೈತರೀಗ ಶಕ್ತರಲ್ಲ. ಅವರ ತಲೆಯನ್ನು ತೊಳೆಯಲಾಗಿದೆ. ಸರ್ಕಾರ, ಮಾಧ್ಯಮಗಳು, ಅಧಿಕಾರಿಗಳು, ವಿಜ್ಞಾನಿಗಳು, ಅಂತರರಾಷ್ಟ್ರೀಯ ಕಂಪನಿಗಳು, ದೇಶೀ ಕಂಪನಿಗಳು ಇವರೆಲ್ಲಾ ಇದರಲ್ಲಿ ಪ್ರಮುಖ

ಪಾತ್ರಧಾರಿಗಳು. ರೈತರ ಪಾರಂಪರಿಕ ಜ್ಞಾನವನ್ನೆಲ್ಲಾ ನಿರಾಕರಿಸಿ ಹೊಸಕಿ ಹಾಕಿ ಮರೆಸಿದ್ದಾರೆ. ಬೀಜವಿಲ್ಲದೆ ಬೆಳೆ ತೆಗೆಯಬಹುದೆಂದು ನಂಬಿಸಿ ರೈತರನ್ನು, ಇಡೀ ದೇಶವನ್ನು ಬೀಜರಹಿತರನ್ನಾಗಿ ಮಾಡುವಲ್ಲಿ ಬಹುಪಾಲು ಸಫಲರಾಗಿದ್ದಾರೆ.

ಆದರೆ ಸತ್ಯ ಶಕ್ತಿಶಾಲಿ. ಸ್ವತಃ ಬೀಜವಿಲ್ಲದೆ ಬದುಕುವುದು ಅಸಾಧ್ಯವೆಂದು ಇದೀಗ ಜಗತ್ತಿನ ಜನಸಮುದಾಯಕ್ಕೆ ಗೊತ್ತಾಗುತ್ತಿದೆ. ಮೂಲ ಬೀಜಗಳ ಹುಡುಕಾಟ, ರಕ್ಷಣೆ ಭರದಿಂದ ಸಾಗಿದೆ. ವಾಡೇಗೋಡೇ ಮೂಡೆಗಳ ಮೂಲೆ ಮಡುಕುಗಳಲ್ಲಿ ಅಳಿದುಳಿದ ಸತ್ಯದ ಬೀಜಗಳನ್ನು ಹೆಕ್ಕಿ ಕಾಯಕಲ್ಪ ಕೊಡುವ ಕೆಲಸವನ್ನು ರೈತರೇ ಆರಂಭಿಸಿದ್ದಾರೆ. ವಿಜ್ಞಾನಿಗಳಿಗೂ ಜ್ಞಾನೋದಯವಾದ ವರದಿಗಳು ಬರುತ್ತಿವೆ. ಅಜ್ಜಿಯ ಗಂಟಿನೊಳಗೆ ಇರಬಹುದಾದ ಬೀಜಗಳು ಮುಂಗಾರಿನ ಮೊದಲು ಮಳೆಯ ವಾಸನೆಗೆ ಮುಲುಗತೊಡಗಿವೆ. ಅಯ್ಯನ ರಾಗಿ, ದೊಡ್ಡಿ ಭತ್ತಗಳ ಬೀಜಕ್ಕಾಗಿ ಸ್ಪರ್ಧೆ ಶುರುವಾಗಿದೆ. ಅವುಗಳ ರುಚಿ ಎಲ್ಲರ ಗಮನ ಸೆಳೆದು ಬರಸೆಳೆಯುತ್ತಿದೆ.

ನಾಲಾಬಯಲುಗಳಲ್ಲಿ ರಾಸಾಯನಿಕ ವಿಷಗಳ ನಿತ್ಯ ನರಕವುಂಡು ಬೆಳೆದ 'ಸೋನಾಮಸೂರಿ' ಅನ್ನವನ್ನು ಕಾಗೆಗಳೂ, ನಾಯಿಗಳೂ ತಿನ್ನಲು ನಿರಾಕರಿಸುವುದನ್ನು, ರುಚಿ ಇಲ್ಲದ ಗಬ್ಬು ವಾಸನೆಯ ರಾಸಾಯನಿಕ ಕೊಳೆಯಂತಿರುವ ವಿವಿಧ ತರಕಾರಿಗಳನ್ನು ಜನ ಹೀಗಳೆಯುತ್ತಿರುವುದೂ ಶುಭ ಸೂಚನೆಯೇ ಆಗಿದೆ. ಕೆಂಪಕ್ಕಿಯ ಸ್ವಾದ, ಅಯ್ಯನ ರಾಗಿಯ ಮಹಾತ್ಮೆ ಎಲ್ಲೆಲ್ಲೂ ಹಬ್ಬುತ್ತಿದೆ. ಅಜ್ಜಗೊನೆ, ಕೀರೆ, ಬಸಳೆ, ದಾಗಡಿ, ಕೆಸವೆ, ಹರಿವೆ, ಕುಯ್ಕು ಇತ್ಯಾದಿ ಸಹಜ ಸೊಪ್ಪುಗಳು ಮತ್ತೆ ಮಾತು ತೆಗೆಯುತ್ತಿವೆ. ಕೆಟ್ಟು ಕೆರೆಹಿಡಿದು ಹೋಗಿದ್ದ ನಾಲಿಗೆ, ರಾಸಾಯನಿಕ ಅನ್ನ ಉಂಡು ಗೊಬ್ಬರದ ಗುಂಡಿಯಾಗಿದ್ದ ಹೊಟ್ಟೆ, ನಿಜ ರುಚಿಯನ್ನು ಸವಿಯಲು ಹಾತೊರೆಯುತ್ತಿದೆ, ಅದರೆ ಬೀಜ?

ಎಲ್ಲಿ ಹುಡುಕುವುದು ಬೀಜವ, ಯಾರನ್ನಾದರೂ ಕೇಳಲಿ 'ನಮ್ಮತ್ರ ಆ ಬೀಜ ಇಲ್ಲ ಎಲ್ಲೋದು' ಎನ್ನುವ ಉತ್ತರ. ಎಲ್ಲಿ ಹೋದವು ಕರಗಿ ಆ ಬೀಜಗಳು. ಬೀಜದ ಗುಣವೇ ಹಾಗೆ, ನಂಬಿ ಬಳಸಿದರ ಬೆಳೆಸಿದರೆ ಮಾತ್ರ ಬೀಜ. ಇಲ್ಲದಿದ್ದರೆ ನಿಸ್ತೇಜ. ಒಂದು ಬೀಜ ನೆಲಕ್ಕೆ ಬಿದ್ದರೆ ಸಾವಿರವಾಗುತ್ತವೆ, ಲಕ್ಷವಾಗುತ್ತವೆ ವೃಕ್ಷವಾಗಿ ಶಾಶ್ವತವಾಗುತ್ತವೆ. ನಂಬಿಕೆ ಇರಬೇಕು, ಕಾಯಬೇಕು, ನೆಲದ ಸ್ಪರ್ಶದ ನಂಟು ಅಂಟಬೇಕು. ಬೀಜವೇ ಇಲ್ಲ ಎನ್ನುವಂತಿಲ್ಲ. ಹಳ್ಳಿಗಳ ಎದೆಗೂಡುಗಳಲ್ಲಿನ್ನು ಬೀಜಗಳಿವೆ ಹಂಚಿಕೊಳ್ಳಬೇಕು, ಮತ್ತೆ ಬಿತ್ತಬೇಕು. ಶಂಬೆ, ಗೋರಿ, ಹೀರೆ, ಮುಳ್ಳುಬದನೆ, ತುಪ್ಪೀರೆ, ಕುಂಬಳ, ನುಗ್ಗೆ ಬೀಜಗಳಿಗೆ ಇವತ್ತಿಗೂ ಅಜ್ಜಿಯರೇ ಗತಿ. ಇವರೇ ಬೀಜ ಬ್ಯಾಂಕು. ಇವರೇ ಅದಕ್ಕೆ ಮ್ಯಾನೇಜರ್. ಬೇವು ಬೆರೆತ, ಬೂದಿ ಬೆರೆತ ಅಪ್ಪಟ ಬೀಜಗಳು ಇಲ್ಲಿ ಲಭ್ಯ. ಯಾರ ಹಂಗೂ ಇಲ್ಲ. ಮಡಕೆ ಸಾಲಿನ ಸಂಭ್ರಮ ಅಜ್ಜಿ ಗಂಟುಗಳ ಸಮೃದ್ಧಿ, ಸೊಪ್ಪಿನ ಮಡಿಗಳ ತಾಜಾತನ, ಮಲ್ಲಿಗೆ ಅಂಟಿನ ನಂಟುಗಳು...ಹಲಸು, ಮಾವು, ಬೇಲ, ಹುಣಸೆ, ನೆಲ್ಲಿ, ಬೀಜ,

ನಿಂಬೆ, ಚಕೋತ ಹಣ್ಣುಗಳು ಹಳ್ಳಿಗರ ಕಣ್ಣುಗಳಲ್ಲಿ ಸತ್ಯದ ಹೊಳಪು ಕಾಣಿಸುತ್ತಿವೆ. ಬಿಳಿಯ ಕೋಳಿ ಸತ್ತು ನಾಟಿ ಕೋಳಿ ಕಾಲದ ಕೂಗಿಗೆ ದನಿ ಕೊಡುತ್ತಿದೆ. ಇದಕ್ಕೊಂದು ಹೋರಾಟದ ಛಲ ರೂಪುಗೊಳ್ಳಬೇಕಾದದ್ದು ಅನಿವಾರ್ಯ.

ನಾವು ಮನುಷ್ಯರು ಈಗ ಜಾಗತೀಕರಣದ ಸದ್ದು ಮಾಡುತ್ತಿದ್ದೇವೆ. ಅದೂ ಎಂಥಾ ಜಾಗತೀಕರಣ. ಒಂದನ್ನು ಕೊಂದು, ಇನ್ನೊಂದನ್ನು ತಿಂದು ಮುಗಿಸಿ, ದೊಡ್ಡವರು ಇನ್ನೂ ದೊಡ್ಡವರಾಗುವ ಜಾಗತೀಕರಣ, ಹಾಡುಗಳನ್ನು ಕೊಂದು ಇತರರ ನಗುವನ್ನು ಮಾರುವ, ತಮ್ಮ ನದಿಗುಡ್ಡಗಳನ್ನು ಜತನದಿಂದ ಕಾಪಾಡಿಕೊಂಡು ಇತರ ಬಡ ದೇಶಗಳ ಕೆರೆ ಕಟ್ಟೆ, ಗುಡ್ಡ, ಬೆಟ್ಟ ನದಿ ಕಾಡುಗಳನ್ನು ತರಿದು ಬರಿದು ಮಾಡುವ ಜಾಗತೀಕರಣ. ಸುಳ್ಳುಗಳನ್ನು ಆರಕ್ಕೆ ಮಾರಿ ಸತ್ಯಗಳನ್ನು ಮೂರಕ್ಕೆ ಕೊಳ್ಳುವ ಜಾಗತೀಕರಣ. ಇದು ಕೇಡು ಬೆಳೆಯುವ ಪರಿ. ಆದರೆ ಹಕ್ಕಿಗಳು ಹಾರಲು ಕಲಿತ ಕೂಡಲೇ, ಬೀಜಗಳು ಬಲಿತ ಮರುಕ್ಷಣವೇ, ಭೂಮಿ ಆಕಾಶಗಳ ಎಲ್ಲೆಗಳನ್ನು ಮೀರುವ ಆ ಮೂಲಕ ಉಸಿರು ವಿಸ್ತರಿಸುವ ಕೆಲಸಕ್ಕಿಳಿಯುತ್ತವೆ. ಗಾಳಿ ನೀರುಗಳ ಮೂಲಕ ದ್ವೀಪ ದ್ವೀಪಾಂತರಗಳಲ್ಲಿ ಚಲಿಸಿ ಮೊಟ್ಟೆ ಇಡಬಲ್ಲವು. ಸಮೃದ್ಧಿ ಸಾಧಿಸಬಲ್ಲವು. ಬದುಕಿ ಬದುಕಿಸಬಲ್ಲವು. ಇದು ಹಕ್ಕಿ ಬೀಜಗಳ ಪ್ರೇಮ ಜಾಗತೀಕರಣದ ಪರಿ. ಹಕ್ಕಿಗಳ ಹೊಟ್ಟೆಯೊಳಗೆ ಹಣ್ಣಿನ ನೆಪದಲ್ಲಿ ಹೊಕ್ಕ ಬೀಜಗಳು ತಮ್ಮ ಕತೆ ಮುಗಿಯಿತೆಂದುಕೊಳ್ಳುವಷ್ಟರಲ್ಲಿ ಜಠರಾಗ್ನಿಯಿಂದ ಮುಕ್ತಿ ಸಿಕ್ಕಿ ಅವುಗಳಿಗೆ ಬೇಕಾಗುವಷ್ಟು ಕಾವು, ಸಾಕಾಗುವಷ್ಟು ಗೊಬ್ಬರ ಎರಡೂ ಸಿಕ್ಕಿ ನೆಲ ಮುಟ್ಟುತ್ತವೆ. ನೆಲವು ಆ ಬೀಜಗಳನ್ನು ತಾಯಿಯಂತೆ ತಬ್ಬಿ ತನ್ನೊಳಗೆ ಸೆಳೆದುಕೊಂಡು ಕಾಯುತ್ತದೆ. ಹೀಗೆ ಹಕ್ಕಿಗಳನ್ನೆ ನೆಚ್ಚಿ ಬದುಕುವ ಅನೇಕ ಗಿಡ ಮರಗಳಿವೆಯೆಂಬುದು ನಿಜ. ಮರದೊಳಗೆ ಮರ ಹುಟ್ಟುವುದು ನಮಗೆಲ್ಲಾ ಚೋದ್ಯ. ಹಕ್ಕಿಗಳಿಗೆ ನಿತ್ಯದ ಆಟ. ಕಾಡಿಗೆ ಆಕಾಶದಲ್ಲೇ ಹೆದ್ದಾರಿಗಳು ಸೃಷ್ಟಿಯಾಗಿ ಬಲೆ ಬೀಸುತ್ತಿರುವ ಈ ಹೊತ್ತಲ್ಲೂ ಇದು ನಿಜವಾ ಎಂದರೆ ಉತ್ತರ ಹುಟ್ಟುವುದು ಮಹಾ ಕಠಿಣ. ಆದರೆ ಈ ಹೊತ್ತಲ್ಲೂ ಅವು ತಮ್ಮ ಪಾಡಿಗೆ ಹಾಡು ಕಟ್ಟುತ್ತಲೇ ಇವೆ. ಹಣ್ಣು ಹಂಪಲು, ಸೊಪ್ಪು ಸದೆ ತಿನ್ನುವ ಎಲ್ಲ ಪ್ರಾಣಿ ಪಕ್ಷಿಗಳೂ ಬೀಜ ಪ್ರಸಾರ ಮಾಡಲೇ ಬೇಕು ಮಾಡುತ್ತವೆ. ಒಂದು ಮರ ನೂರಾಗಿ ಸಾವಿರವಾಗಿ ಹೆಚ್ಚಿ ಬೆಳೆದರೆ ಅನ್ನ ಆಹಾರ. ಆಗ ಮನುಷ್ಯ ಒಳ್ಳೆಯವನಾಗಿದ್ದಿರಬೇಕು. ಹಕ್ಕಿಗಳಂತೆ ಪ್ರಾಣಿಗಳಂತೆ, ಮನುಷ್ಯನೂ ಆಹಾರ ಸಂಗ್ರಹಿಸಿ ತಿನ್ನುತ್ತಿದ್ದ ಕಾಲದಲ್ಲಿ ಹಣ್ಣು ತಿಂದು ಅದೇ ಹಣ್ಣು ಬಿಟ್ಟ ಮರವನ್ನು ಕಡಿದಿರಲಾರ.

'ಮಯೂರ' ಸಾಭಾರ

* * *

ಕರ್ನಾಟಕ ಸಂಗೀತಕ್ಕೆ ಮೇಲುಕೋಟೆಯ ಸಂಬಂಧ

-ವಿ.ಎಸ್.ಸಂಪತ್‌ಕುಮಾರಾಚಾರ್ಯ

ಮೇಲುಕೋಟೆಯನ್ನು ಸಂಗೀತ ಶಿಬಿರಕ್ಕಾಗಿ ಆರಿಸಿಕೊಂಡಿರುವುದು ಬಹಳ ಸೂಕ್ತವಾಗಿದೆ. ಕಾರಣ ಈ ಊರಿಗೂ ಸಂಗೀತಕ್ಕೂ ಸಂಬಂಧ ಬಹಳ ಪ್ರಾಚೀನವಾದುದು. ಶ್ರೀವೈಷ್ಣವ ಆಚಾರ್ಯರಲ್ಲಿ ಪ್ರಥಮರಾದ ಶ್ರೀನಾಥಮುನಿಯವರು (೮೨೩-೯೨೪ ಕ್ರಿ.ಶ) ಈಗಿನ ತಮಿಳುನಾಡಿನ ದಕ್ಷಿಣ ಆರ್ಕಾಟ್ ಜಿಲ್ಲೆಯ ವೀರನಾರಾಯಣಪುರದವರು (ಕಟ್ಟು ಮನ್ನಾರ್ ಕೋವಿಲ್). ಇವರು ಬಹುಶ್ರುತರಾದ ಯೋಗಿಗಳು. ಒಂದು ದಿನ ಊರಿನ ದೇವಾಲಯದಲ್ಲಿ ಮೇಲ್ನಾಡಿನ ಇಬ್ಬರು ಶ್ರೀವೈಷ್ಣವರು ದೇವರ ಸನ್ನಿಧಿಯಲ್ಲಿ 'ಆರಾವಮುದೇ' ಎಂದು ಆರಂಭವಾಗುವ ನಮ್ಮಾಳ್ವಾರರ ಕೆಲವು ಪಾಶುರಗಳನ್ನು ಹಾಡಿದ್ದನ್ನು ಕೇಳಿ ಅವುಗಳ ತುಂಬಿದ ಇಂಪು, ಮಾತುಗಳ ಸೊಬಗು, ಭಾವಪುಷ್ಟಿಗೆ ಮಾರುಹೋಗಿ ತಮಿಳುನಾಡಿನ ಮೂಲೆ ಮೂಲೆಗಳಲ್ಲೆಲ್ಲಾ ಅಲೆದು ಆಳ್ವಾರರು ಹಾಡಿದ್ದ ಪಾಶುರಗಳನ್ನೆಲ್ಲಾ ಕಷ್ಟಪಟ್ಟು ಸಂಕಲಿಸಿ ತನ್ನ ಸೋದರಳಿಯರ ನೆರವಿನಿಂದ ಅವುಗಳಿಗೆ ಸ್ವರಸಂಯೋಜನೆ ಮಾಡಿ ಅವುಗಳನ್ನು ಹಾಡುವುದನ್ನು ಪ್ರಾಚಾರ್ಯಕ್ಕೆ ತಂದು ಅವುಗಳನ್ನು ನರ್ತನಕ್ಕೂ ಏರ್ಪಾಡು ಮಾಡಿ ಶ್ರೀರಂಗಂ ಮತ್ತು ಎಲ್ಲ ವೈಷ್ಣವ ದೇವಾಲಯಗಳಲ್ಲಿ ಇಂದಿಗೂ ನಡೆದುಕೊಂಡು ಬರುವಂತೆ ಮಾಡಿದರು. ಆಳ್ವಾರರ ಈ ಪಾಶುರಗಳಿಗೆ ನಾಲಾಯಿರ ದಿವ್ಯ ಪ್ರಬಂಧ ತಿರುವಾಯಿಮೊಳಿ-ಸಿರಿಬಾಯಿನುಡಿ ಎಂದು ಹೆಸರು. ಪೂರ್ವದಲ್ಲಿ ಇವುಗಳನ್ನು ಹಾಡುತ್ತಿದ್ದ ಪಣ್‌ಗಳು(ರಾಗಗಳು) ಮತ್ತು ಅವುಗಳಿಗೆ ಸಮಾನವಾದ ಈಗಿನ ಹಲವು ರಾಗಗಳನ್ನು ಗೊತ್ತು ಮಾಡಲಾಗಿದೆ. ಇದೇ ಸ್ಥಳದ ಸಂಸ್ಕೃತ ಸಂಶೋಧನಾ ಸಂಸತ್‌ನಲ್ಲಿರುವ ೫೦೦ ವರ್ಷಗಳಿಗೂ ಹಿಂದಿನ ಒಂದು ಹಸ್ತಪ್ರತಿಯಲ್ಲಿ ಸುಮಾರು ೬೭ ಪಾಸುರಗಳು ಅವುಗಳ ಪಣ್ ಮತ್ತು ಒತ್ತುಗಳನ್ನು(ತಾಳಗಳನ್ನು)ಹೇಳಿರುವುದು ನವರೋಜ್ ಮುಂತಾದ ಹಲವು ರಾಗಗಳ ಚರಿತ್ರೆಯನ್ನು ತಿಳಿಯಲು ಒಂದು ಮುಖ್ಯ ಆಕರವಾಗಿದೆ.

ಇಂತಹ ಕ್ಷೇತ್ರದಲ್ಲಿ ಕಲಿತ ಶಿಬಿರಾರ್ಥಿಗಳು ೧೨ ವಿವಿಧರಾಗಗಳ, ವಾಗ್ಗೇಯಕಾರರ ಕೃತಿಗಳನ್ನು ಕಲಿತಿದ್ದಾರೆ. ಆಚಾರ್ಯತ್ ಪಾದ ಮಾದತ್ತೇ ಎಂಬ ಮಾತನ್ನು ನೆನಪಿನಲ್ಲಿಟ್ಟುಕೊಂಡು ಕಲಿತಿರುವ ಕೃತಿಗಳು ಮತ್ತು ಅವುಗಳ ರಾಗಗಳನ್ನು ಹೇಗೆ ತಮ್ಮದನ್ನಾಗಿ ಮಾಡಿಕೊಳ್ಳ ಬೇಕೆಂಬುದನ್ನು ಸದ್ಗುರು ಸಂತ ತ್ಯಾಗರಾಜಸ್ವಾಮಿ ತಮ್ಮ 'ಸ್ವರರಾಗ ಸುಧಾ'(ಶಂಕರಾಭರಣ) ಎಂಬ ಕೃತಿಯಲ್ಲಿ ಬಹಳ ಅರ್ಥಗರ್ಭಿತವಾಗಿ ವಿವರಿಸಿದ್ದಾರೆ. 'ಸ್ವರರಾಗ ಸುಧಾ ರಸಯುತ ಭಕ್ತಿ ಸ್ವರ್ಗಾ ಪವರ್ಗಮುರಾ, ಓ ಮನಸಾ!' ಇದರಲ್ಲಿ ತ್ಯಾಗರಾಜರು ಸಂಗೀತದ ವಿವಿಧ ಮುಖಗಳನ್ನು ವಿವರಿಸಿದ್ದಾರೆ. ಈ ಕೃತಿಯು ಸಂಗೀತಗಾರರಿಗೆ ಮತ್ತು ಕಲಿಯುವವರಿಗೆ ಮಲ್ಟಿವಿಟಮಿನ್ ಕ್ಯಾಪ್ಸೂಲ್ ಇದ್ದಂತೆ ಎಂದು ಖ್ಯಾತ ವಿದ್ವಾಂಸ ಶೆಮ್ಮಯಡಿ ಶೀನಿವಾಸ ಅಯ್ಯರ್ ಹೇಳಿದ್ದಾರೆ.

ಶ್ರುತಿ ಅಂದರೆ ಕೇಳಲ್ಪಡುವಂತಹದು. ಸಂಗೀತಗಾರನು ಶ್ರುತಿಯಿಂದ

ಸ್ವರವನ್ನು ಉತ್ಪತ್ತಿ ಮಾಡುತ್ತಾನೆ. ಅದು ಗಮಕಯುತವಾಗಿರುತ್ತದೆ. ಇದು ವರ್ಣಮಾಲೆಯ ಅಕ್ಷರದಂತೆ. ಇದರಲ್ಲಿ ಪ್ರಗತಿ ಸಾಧಿಸಿದಾಗ ರಾಗವಾಗುತ್ತದೆ. ರಾಗವು ಕೇವಲ ಸ್ವರಗಳ ಗುಚ್ಛವಲ್ಲ. ಅದು ಜೀವವಿರುವ ಕ್ರಮಬದ್ಧವಾಗಿ ಸಮ್ಮಿಳನಗೊಂಡಿರುವ ಒಂದು ಸುಂದರ ಕಟ್ಟಡ. ರಾಗವು ಮೊದಲು ಬಂದಿತು. ಅದರ ಬೆನ್ನಹಿಂದೆ ಲಕ್ಷಣವು ಬಂದಿತು. ಒಂದು ರಾಗವನ್ನು ಮನೋಹರವಾಗಿ ಹಾಡಿದರೆ ಅದು ಸುಂದರ ಭಗವದ್ರೂಪ. ಅವನು ಸಪ್ತಸ್ವರಗಳ ಚಾರಿಯಾಗಿದ್ದಾನೆ, ಅದೇ ಸಂಗೀತ. ಪ್ರತಿಯೊಂದು ರಾಗವೂ ಒಂದು ಸುಂದರ ರೂಪದಿಂದ ಗೆಜ್ಜೆನಾದದೊಡನೆ ನಾಟ್ಯವಾಡುತ್ತದೆ.(ಶ್ರೀ ಪಪ್ಪಿ(ಯು–ಅಠಾಣ–ತ್ಯಾಗರಾಜ)

ಇದೇ ರೀತಿ ನಾವು ಸಾಹಿತ್ಯದಿಂದ ಅದರ ಭಾವ ಮತ್ತು ತಾಳದಿಂದ ಲಯಕ್ಕೆ ಪ್ರಗತಿ ಸಾಧಿಸಬೇಕು. ಇವುಗಳ ಮಧುರ ಸಮ್ಮಿಳನ ಮಾಡಿ ಹಾಡಿದಾಗ ಅದರಿಂದ ಆಗುವ ಸಂಗೀತವೇ 'ಸುಧಾರಸ'(ಅಮೃತ). ಈ ಸುಧಾರಸದೊಡನೆ ಭಕ್ತಿ ಸಂಯೋಜಿತವಾದಾಗ ಅದೇ ಸುಧಾರಸಯುತ ಭಕ್ತಿ. ಭಕ್ತಿಯಿಂದ ನಿರಂತರ ಭಗವಧ್ಯಾನ. ಅದರಿಂದ ಮೋಕ್ಷ(ಸ್ವರ್ಗ ಮತ್ತು ಅಪವರ್ಗ). ಭಕ್ತಿ ವಿಹೀನೂಕು ಮೋಕ್ಷಮುಗಲಾದಾ'–ಭಕ್ತಿ ವಿಹೀನನಿಗೆ ಮೋಕ್ಷವು ದೊರಕದು ಎಂದು ಹಾಡಿದ್ದಾರೆ ಸಂತ ತ್ಯಾಗರಾಜರು. ।ದಾನ ವಾರಿಯದಿವ್ಯ ನಾಮ ರಹಿತವಾದ ಹೀನ ಸಂಗೀತ ಸಾಹಿತ್ಯಕ್ಕೆ ಮನವಿತ್ತು ಕೇಳನೋ ಹರಿತಾಳನೋ। ತಾಳಮೇಳಗಳಿದ್ದು ಪ್ರೇಮವಿಲ್ಲದಗಾನ (ಪುರಂದರ ದಾಸರು) 'ಭಾವವಿಲ್ಲದ ಭಕುತಿ ಅದು ಕುಹಕ ಯುಕತಿ'–ಕನಕದಾಸರು.

ರಾಗ ಸುಧಾರಸವನ್ನು ತಯಾರಿಸುವುದು ಹೇಗೆ? ಪಾಯಸದಂತೆ. ರಾಗ, ಭಾವ, ಲಯ ಇವುಗಳನ್ನು ಸರಿಯಾದ ಪ್ರಮಾಣದಲ್ಲಿ ಸೂಕ್ತವಾದ ಸಮಯದಲ್ಲಿ ಬೆರೆಸಿದರೆ ಸುಧಾರಸ. ಇದಕ್ಕೆ ಖಂಡ ಸಕ್ಕರೆ ಸೇರಿಸಿದಾಗ ಅದನ್ನು ಸೇವಿಸಿದರೆ ಎಂತಹ ಸೌಖ್ಯ! 'ಸ್ವರರಾಗಲಯ ಸುಧಾರಸಮಂದು ವರರಾಮನಾಮಮನೆ ಕಂಡ ಚಕ್ಕೆರ ಮಿಶ್ರಮುಜೇಸಿ ಭುಜಿಂಚೇ' 'ಇಂತ ಸೌಖ್ಯಮನಿ ನೇ ಜೆಪ್ಪಜಾಲ' ಎಂದು ಹಾಡಿದ್ದಾರೆ ಸಂತ ತ್ಯಾಗರಾಜರು. ರಾಮನಾಮ ಪಾಯಸಕ್ಕೆ ಕೃಷ್ಣನಾಮ ಸಕ್ಕರೆ ವಿಠಲನಾಮ ತುಪ್ಪ' ಎಂದಿದ್ದಾರೆ ಪುರಂದರದಾಸರು.

ಈ ಸುಧಾರಸವು ಪರಮಾನಂದ ನೀಡುತ್ತದೆ. ಅದು ಕೋಮಲವಾದ ಕಮಲ ಪುಷ್ಪದಂತೆ. 'ಪರಮಾನಂದ ಮನೆ ಕಮಲಮು. ಅದರ ಮೇಲೆ ಕಪ್ಪೆ, ಕೊಕ್ಕರೆ ಕುಳಿತು ಕೂಗುವುದಕ್ಕೆ ಆರಂಭಿಸಿದರೆ ಅದು ಕೆಟ್ಟು ಉದುರು ಹೋಗಿ ನಾಶವಾಗುತ್ತದೆ ಇಂತಹುದಕ್ಕೆ ಅವಕಾಶಕೊಡಬೇಡಿ ಎಂದು ತ್ಯಾಗರಾಜರು ಎಚ್ಚರಿಕೆ ನೀಡಿದ್ದಾರೆ.'ಪರಮಾನಂದ ಮನೆ ಕಮಲಮುಪ್ಪೆ ಬಿಕಭೇಕಮು ಚೆಲಗಿಯೇಮಿ? ಓ ಮನಸಾ!'

ಮೂಲಾಧಾರದಿಂದ ಬರುವ ನಾದಜ್ಞಾನ ಉಂಟಾದಾಗ ಸಂತೋಷವುಂಟಾಗುತ್ತದೆ. 'ಮೂಲಾಧಾರಜ ನಾದಮು ಎರುಗುಟೇ ಮುದಮುಗು'. ಕೋಲಾಹಲ ಸಪ್ತಸ್ವರ ಗೃಹ ಮೂಲ ಗುರುತೇ ಮೋಕ್ಷಮುರಾ, ಓ ಮನಸಾ! ಕೋಲಾಹಲವೆಂದರೆ ಸಪ್ತಸ್ವರಗಳು ಯಾವಾಗಲೂ ಕ್ರಿಯಾತ್ಮಕವಾಗಿ ಕಂಪಿಸಿ ಸಂತೋಷದಾಯಕವಾದವು. ಅಂತೆಯೇ ಸಂಗೀತವು ಅಳುಮೋರೆಗಳಿಗಲ್ಲ. ಅದು

ಯಾವಾಗಲೂ ಆನಂದದಾಯಕವಾಗಿರಬೇಕು.

ಪ್ರಣವನಾದವನ್ನು ಕೇಳಲು ಸಾಧ್ಯವೇ? ಕೇಳಬಹುದು. ಪ್ರಶಾಂತವಾದ ಸ್ಥಳದಲ್ಲಿ ಪದ್ಮಾಸನದಲ್ಲಿ ಕುಳಿತು ಎರಡು ಕಿವಿಗಳನ್ನು ಮುಚ್ಚಿಕೊಂಡರೆ ಒಂದು ಬಗೆಯ ಹಿಸ್ ಶಬ್ದ ಕೇಳಿಬರುತ್ತದೆ. ಇದೇ ಪ್ರಣವನಾದ. ಇದನ್ನು ಪ್ರತಿನಿತ್ಯ ಸ್ವಲ್ಪ ಕಾಲ ಕೇಳುತ್ತಾ ಹೋದರೆ ಕೆಲವೇ ವಾರಗಳಲ್ಲಿ ಇದೊಂದು ಸುಂದರವಾದ ನಾದವೆಂದರಿಯಬಹುದು.

ತೆಲಗು ಮಹಾಕವಿ ಪೋತನನು ತನ್ನ ಭಾಗವತದಲ್ಲಿ ಕಂಸನು ಪ್ರಣವನಾದಕ್ಕೆ ಹೇಗೆ ಪ್ರತಿಕ್ರಿಯೆ ಮಾಡಿದ ಎಂಬುದನ್ನು ವಿವರಿಸುತ್ತಾ-ದೇವಕಿಯ ಎಂಟನೆಯ ಮಗು ಹುಟ್ಟಿದ ಸುದ್ದಿಯನ್ನು ಕೇಳಲು ಕಾತುರತೆಯಿಂದ ಕಾದಿದ್ದ. ಗಾಳಿ ಬೀಸಿ ಶಬ್ದವಾದರೂ ಕೃಷ್ಣ ಹುಟ್ಟಿದ್ದಾನೆ ಎಂದು ಭಯದಿಂದ ನಡುಗುತ್ತಿದ್ದ. ಕೊನೆಗೆ ಅಸಹಾಯಕನಾಗಿ ಎರಡು ಕಿವಿಗಳನ್ನೂ ಮುಚ್ಚಿಕೊಂಡ. ಪ್ರಣವನಾದ ಕೇಳಿ ಬಂತು. ಕೃಷ್ಣ ತನ್ನ ಹೊಟ್ಟೆಯಲ್ಲೇ ಇದ್ದಾನೆ. ತನ್ನ ಕೊನೆಗಾಲ ಸಮೀಪಿಸಿತು ಎಂದು ನಂಬಿದ.

ಮೂರನೆಯ ಚರಣದಲ್ಲಿ-- 'ಮದ್ದಲ ತಾಳಗತಲು ತೆಲಿಯಕನೇ ಮದಿನಂಚುಟ ಸುಖಮಾ? ಶುದ್ಧ ಮನಸು ಲೇಕ ಪೂಜಿಚೇಯುಟ ಸೂಕರ ವೃತ್ತಿರಾ" ಎಂದಿದ್ದಾರೆ ತ್ಯಾಗರಾಜರು. ಲಯವೆಂದರೆ ವಿಲೀನವಾಗುವುದು. ಗಾಯಕನು ತಾಳದಿಂದ ಲಯದಲ್ಲಿ ವಿಲೀನವಾದಾಗ ಅವನ ದೇಹವು ಸಂಗೀತದೊಡನೆ ಒಂದಾಗಿ ತಾನೇ ತಾಳಕ್ಕೆ ಪ್ರತಿಕ್ರಿಯೆ ನೀಡುತ್ತದೆ. ತಾಳಗತಿ ತಿಳಿಯದೆ ಮೃದಂಗವನ್ನು ಬಡಿದರೆ ಸುಖವೆಲ್ಲಿದೆ? ಶುದ್ಧ ಮನಸ್ಸಿನಿಂದ ಪೂಜೆಮಾಡದಿದ್ದರೆ ಅದು ಹಂದಿಯ ವೃತ್ತಿ. ಅಂದರೆ ಮೃದಂಗ ಪಕ್ಕ ವಾದ್ಯವನ್ನು ಪಕ್ಕ ವಾದ್ಯವಾಗಿ ನುಡಿಸದಿದ್ದರೆ ಇಡೀ ವಾತಾವರಣವೇ ಖಲುಷಿತವಾಗಿ ಸಂಗೀತಗಾರನ ಮನಸ್ಸು ಕದಡಿ ಶುದ್ಧ ಮನಸ್ಸಿನಿಂದ ಹಾಡಲಾಗುವುದಿಲ್ಲ.

ಎರಡನೆಯ ಚರಣದಲ್ಲಿ– ' ಬಹುಜನ್ಮ ಮುಲಕು ಪೈನಿ ಜ್ಞಾನಿಯೈ ಬರಗುಟ ಮೋಕ್ಷ ಮುರಾ' ಎಂದಿದ್ದಾರೆ. ಅನೇಕ ಜನ್ಮಗಳನ್ನೆತ್ತಿ ಒಬ್ಬ ಮಾನವ ಜ್ಞಾನಿಯಾಗಬಹುದು. ಅದು ಮೋಕ್ಷಕ್ಕೆ ದಾರಿ ತೋರಿಸಬಹುದು. ಆದರೆ "ಸಹಜ ಭಕ್ತಿ ತೋರಾಗಜ್ಞಾನ ಸಹಿತುಡು ಮುಕ್ತುಡುರಾ!" ಸಹಜವಾದ ಭಕ್ತಿಯುಳ್ಳ ವ್ಯಕ್ತಿ ರಾಗಜ್ಞಾನ ಪಡೆದಿದ್ದರೆ ಅವನು ಜೀವನ್ಮುಕ್ತಾತ್ತಃ ಆದ್ದರಿಂದ ಮೋಕ್ಷಕ್ಕೆ ಶೀಘ್ರವಾದ ದಾರಿ ಸಂಗೀತ ತಿಳಿದ ಸಹಜ ಭಕ್ತಿ.

ಕೃತಿಗಳ ಸಂಖ್ಯೆಗಿಂತ ಮುಖ್ಯವಾದುದು ಅವುಗಳನ್ನು ಸಾದನೆ ಮಾಡಿ ತಮ್ಮದನ್ನಾಗಿ ಮಾಡಿಕೊಳ್ಳುವುದು ಬಹಳ ಮುಖ್ಯ. ಹಿಂದೆ ಇದ್ದ ಖ್ಯಾತ ಪಿಟೀಲು ವಿದ್ವಾಂಸ ದ್ವಾರ ವೆಂಕಟಸ್ವಾಮಿ ನಾಯ್ಡುರವರ ಸಾಧಕ ಅನುಕರಣೀಯ. ಹಾಗೆಯೇ ಸ್ವರಕಲ್ಪನೆಯ ಲೆಕ್ಕಚಾರದಲ್ಲಿ ಮುಳುಗಿದರೆ ಅದು ಝಿಂಕ್‌ಷೀಟಿಗೆ ಕಲ್ಲು ಹೊಡೆದಂತೆ ಎಂದು ಖ್ಯಾತ ಗಾಯಕ ಅರಿಯಕುಡಿ ರಾಮಾನುಜ ಅಯ್ಯಂಗಾರರು ಎಚ್ಚರಿಕೆ ನೀಡುತ್ತಿದ್ದರು. ಪ್ರತಿಯೊಂದು ಸ್ವರವೂ ಗಮಕಯುಕ್ತವಾಗಿ ರಾಗರಸದಲ್ಲಿ ತೊಯ್ದಿರಬೇಕು ಎನ್ನುತ್ತಿದ್ದರು.

***

ಪೂಜೆ, ಪ್ರಾರ್ಥನೆ, ಬ್ರಹ್ಮಚರ್ಯಗಳ ಬಗ್ಗೆ ಗಾಂಧೀ ಮತ್ತು ಟಾಗೋರ್

- ಗುರುದಯಾಳ್ ಮಲ್ಲಿಕ್

ಅಸೀಮಿತವಾದುದನ್ನು ಸೀಮಿತಗೊಳಿಸುವುದು ಪಾಪವೆಂದು ಉಪನಿಷತ್ತೊಂದರಲ್ಲಿ ಹೇಳಲಾಗಿದೆ. ಗಾಳಿ ಮತ್ತು ಅನಂತತೆಯ ಬೆಳಕು ಒಳಗೆ ಹರಿದು ಬರಬೇಕು; ತನ್ನ ಜೀವನದ ಚೈತನ್ಯ ಉಳಿದುಕೊಂಡು ಬರಬೇಕೆಂದು ಪ್ರತಿಯೋರ್ವ ಮಹಾ ಪುರುಷನೂ ಜೀವನವೆಂಬ ತನ್ನ ಮನೆಯ ಒಂದು ಕಿಟಕಿಯನ್ನುಸದಾ ತೆರೆದಿಟ್ಟಿರುತ್ತಾನೆ. ಆದರೆ ಬಹುಪಾಲು ಜನರು ಒಂದು ಎಲ್ಲೆಯೊಳಗೇ ಇರಲು, ಚಿಂತಿಸಲು ಮತ್ತು ಕೆಲಸ ಮಾಡಲು ಇಷ್ಟ ಪಡುತ್ತಾರೆ. ಹಾಗೂ ಆ ರೀತಿಯಲ್ಲಿ ನಂಬಿಕೆಯಿಟ್ಟುಕೊಂಡೇ ವ್ಯವಹರಿಸುತ್ತಾರೆ. ಇದು ವಿಶೇಷವಾಗಿ ಧಾರ್ಮಿಕ ಕ್ಷೇತ್ರದಲ್ಲಿ ಕಂಡುಬರುತ್ತದೆ. ಅನಂತವಾಗಿರುವುದನ್ನು ಒಂದು ವಿಗ್ರಹದ ರೂಪದಲ್ಲಿ ಮಾನವ ತಂದಿರಿಸುತ್ತಾನೆ. ಯಾವುದು ಪೂರ್ಣ ದೃಷ್ಟಿಯದಾಗಿದೆಯೋ ಅದನ್ನು ಅಪೂರ್ಣ ದೃಷ್ಟಿಗೆ ತಂದು ನಿಲ್ಲಿಸುತ್ತಾನೆ. ಇದರ ಪರಿಣಾಮ ನಿರ್ದಿಷ್ಟವಾದ ಸಂಕುಚಿತತೆ ಮನೋ ದೃಷ್ಟಿಯಲ್ಲಿ ಮತ್ತು ಬಾಹ್ಯ ನೋಟದಲ್ಲಿ. ಇದು ಅಂಧ ವಿಶ್ವಾಸ ಹಾಗೂ ಭಿನ್ನತೆಗೆ ಕಾರಣವಾಗುತ್ತದೆ. ಆಗ ದೇವತೆಗಳಲ್ಲಿ ಪರಸ್ಪರ ವಿಧ್ವಂಸಕ ಸಮರ ಪ್ರಾರಂಭವಾಗುತ್ತದೆ. ಇಂಥ ಯುದ್ಧಗಳ ವರ್ಣನೆಯಿಂದ ಮಾನವ ಇತಿಹಾಸದ ಪುಟಗಳು ರಕ್ತ ಸಿಂಚಿತವಾಗಿವೆ. ಈ ದುರಂತದಿಂದ ಪಾರಾಗುವ ಉಪಾಯ ಅನಂತತೆಯ ನೋಟವನ್ನು ನವನವೀನವಾಗಿಯೂ ಸುವಾಸಿತವಾಗಿಯೂ ಉಳಿಯುವಂಥ ಪೂಜಾ ಕ್ರಮವನ್ನು ಬೆಳೆಸಿಕೊಳ್ಳುವುದು. ಆಗ ಸಾಧಕನಿಗೆ ಒಂದು ಹನಿ ನೀರಿನಲ್ಲಿ ಅನಂತ ಸಾಗರವನ್ನು ನೋಡಲು, ವ್ಯಷ್ಟಿಯಲ್ಲಿ ಸಮಷ್ಟಿಯನ್ನು ನೋಡಲು ಸಾಧ್ಯವಾಗುವುದು. ಅನಂತತೆಯ ಕಡೆಗೆ ಮುಖ ಇರುವ ಕಿಟಕಿಗೆ ಅಡ್ಡಿ ಮಾಡುವ, ಮಧ್ಯೆ ಪ್ರವೇಶಿಸುವ ಅಂಥ ಯಾವುದೇ ವಿಗ್ರಹಕ್ಕೆ ಗಾಂಧೀ ಮತ್ತು ಟಾಗೂರರಿಬ್ಬರೂ ವಿರೋಧಿಗಳಾಗಿದ್ದರು. ಹೀಗಿದ್ದಾಗ್ಯೂ ಮೂರ್ತಿ ಪೂಜೆ ಮಾಡುವುದರ ಸೀಮಿತ ಉಪಯೋಗವನ್ನು ಅವರು ಅರಿತವರಾಗಿದ್ದರು. ಅದನ್ನು ಅವರು ಎರಡು ಸಮಾನಾಂತರ ರೇಖೆಗಳಂತೆ ಭಾವಿಸಿದ್ದರು. ಅಧ್ಯಾಪಕನು ವಿಧ್ಯಾರ್ಥಿಗಳಿಗೆ ಅಕ್ಷರಾಭ್ಯಾಸ ಮಾಡಿಸಲು ಆ ಎರಡು ಗೆರೆಗಳನ್ನು ಎಳೆದಿರುತ್ತಾನೆ. ವಿಧ್ಯಾರ್ಥಿಗಳು ಅಕ್ಷರಗಳ ಬರೆಯುವಿಕೆಯಲ್ಲಿ ಸಿದ್ಧ ಹಸ್ತರಾದ ಮೇಲೆ ಆ ಗೆರೆಗಳ ಅಗತ್ಯವಿರುವುದಿಲ್ಲ. ಅಂತೇಯೇ ಮನುಷ್ಯನು ಅಂತಿಮವಾಗಿ ಆಕಾರವನ್ನು ನಿರಾಕಾರದ ಧ್ಯಾನಕ್ಕಾಗಿ ಉಪಯೋಗಿಸಬೇಕು. ಆದರೆ ದುರದೃಷ್ಟವಶಾತ್ ವಿಗ್ರಹವೆ ಸರ್ವಾಂತರ್ಯಾಮಿಯಾದ ಸತ್ಯವೆಂದೂ ಅಥವಾ ಜೀವನವೆಂದೂ ತಿಳಿದು ಅದನ್ನು

ಅತಿರೇಕಕ್ಕೆ ಒಯ್ಯುತ್ತಾನೆ. ಗಾಂಧೀ ಸಹ ದಶರಥ ಮಗ ರಾಮನ ಪೂಜೆಯಿಂದಲೇ ಪ್ರಾರಂಭಿಸಿದರು, ಆದರೆ ಕೊನೆಯಲ್ಲಿ ಎಲ್ಲರ ಹೃದಯದಲ್ಲಿರುವ ರಾಮನ ದೃಷ್ಟಿಯನ್ನು ಬೆಳೆಸಿಕೊಂಡರು. ಟಾಗೋರರ ಬ್ರಹ್ಮನು ಮೇರೆ ಇಲ್ಲದವ ಮತ್ತು ಆಚೆಗಿನವನಾಗಿದ್ದ. ಆದರೆ ತೋರಿಕೆಗೆ ಮಾತ್ರ ಅವನು ಬಂಧಿಸಲ್ಪಟ್ಟವನೂ ಮತ್ತು ಇಲ್ಲಿಯೇ ಇರುವಂಥವನೂ ಆಗಿದ್ದ.

"ನಾನು ಆಹಾರವಿಲ್ಲದೆ ಹಲವಾರು ದಿನಗಳಿರಬಲ್ಲೆ. ಆದರೆ ಪ್ರಾರ್ಥನೆಯಿಲ್ಲದೆ. ಒಂದು ನಿಮಿಷವೂ ಇರಲಾರೆ" ಎಂಬುದಾಗಿ ಗಾಂಧೀಜಿ ಒಂದಕ್ಕಿಂತ ಹೆಚ್ಚು ಸಲ ಹೇಳಿದ್ದರು. ಗುರದೇವ ಕೂಡ ದಿನಾಲು ನಿಯಮಿತವಾಗಿ ಮೌನವನ್ನಾಚರಿಸುತ್ತಿದ್ದರು.

ಆದರೆ ಪ್ರಾರ್ಥನೆಯೆಂದರೇನು? ಸಾಮಾನ್ಯವಾಗಿ ಅದನ್ನು ಒಂದು ವಿನಂತಿಯೆಂದು ಅರ್ಥೈಸಲಾಗುತ್ತದೆ. ಆದರೆ ವಿನಂತಿ ಯಾರಿಗೆ ಮತ್ತು ಏತಕ್ಕಾಗಿ? ವ್ಯಕ್ತಿಗಳ ಸಮುದಾಯ ನಿಜವಾದ ಪ್ರಗತಿಯತ್ತಲೂ ಏಳಿಗೆಯತ್ತಲೂ, ಪರಿಪೂರ್ಣತೆಯತ್ತಲೂ ಸಾಗುವಂತೆ ಪ್ರೇರೇಪಿಸುವ ನಿಯಾಮಕನೊಬ್ಬನಿದ್ದಾನೆ ಎಂಬುದಾಗಿ' ಗಾಂಧೀಜಿ ಮತ್ತು ಗುರುದೇವ ಇಬ್ಬರೂ ನಂಬಿದ್ದರು. ಆ ನಿಯಾಮಕ ಕಾಲವೆಂಬರ್ಥದ ವರ್ತಮಾನವನ್ನೂ, ಭೂತವನ್ನೂ ಮತ್ತು ಭವಿಷ್ಯವನ್ನೂ ತಿಳಿದವನಾಗಿದ್ದಾನೆ. ಆ ನಿಯಾಮಕನ ಅಥವಾ ಬ್ರಹ್ಮನ ಇಚ್ಛೆಯನ್ನು ಪ್ರತಿಯೊಂದು ಜೀವಿಯೂ ಆಧ್ಯಾತ್ಮಿಕವಾಗಿ ಹಾಗೂ ನೈತಿಕವಾಗಿ ಬೆಳೆಸಬೇಕು. ಹಾಗೆಂದರೆ, ಅಧಿಕೃತವಾಗಿ ಬದುಕುವುದು. ಅನ್ಯಥಾ ಆತ್ಮಕ್ಕೆ ತೃಪ್ತಿಯಿಲ್ಲ. ಆದ್ದರಿಂದ ಪ್ರಾರ್ಥನೆಯ ಮೂಲಕ ಮನುಷ್ಯನು ಸೃಷ್ಟಿ ಕರ್ತನನ್ನು ಅಥವಾ ಬ್ರಹ್ಮಾಂಡದ ನಿಯಾಮಕನನ್ನು ಪ್ರೇರಣಾರ್ಥವಾಗಿ ಮತ್ತು ಜ್ಞಾನಾರ್ಥವಾಗಿ ಹಾಗೂ ಚೇತನದ ಮಾರ್ಗದಲ್ಲಿ ನಡೆಯುವುದಕ್ಕಾಗಿ ಪ್ರಾರ್ಥಿಸಬಹುದು. ಆದ್ದರಿಂದ ಪ್ರತಿಯೊಂದು ಧರ್ಮದ ಮುಖ್ಯ ಪ್ರಾರ್ಥನೆ "ಓ ದೇವರೇ ನಿನ್ನ ಇಚ್ಛೆಯೇ ನೆರವೇರುವುದು, ನನ್ನದಲ್ಲ." ಒಂದು ಹಾಡು ಹೀಗೆ ಇದೆ;

" ಓ ದೇವರೆ, ನೀ ಬಲ್ಲೆ ಎಲ್ಲವನು,
ನಿನ್ನ ಇಚ್ಛೆ ಪೂರ್ಣಗೊಳ್ಳುವುದು.
ನೀನೇ ಸೃಷ್ಟಿ ಕರ್ತ, ಪಾಲಕ ಮತ್ತು ದೈವಿಕ ಕ್ರಿಯಾ ಶಕ್ತಿ,
ನಿನ್ನ ಇಚ್ಛೆ ನೆರವೇರಲಿ!
ಕೀರ್ತಿಯಲಿ ಅಪಕೀರ್ತಿಯಲಿ, ದುಃಖದಲಿ, ಹರ್ಷದಲಿ,
ಸಾವಿನಲಿ ಅಥವಾ ಬದುಕಿನಲಿ
ನಿನ್ನ ಇಚ್ಛೆ ನೆರವೇರುವುದು.
ತಾರೆಗಳು, ಚಂದ್ರ, ಸೂರ್ಯ ತಮ್ಮ
ಕಕ್ಷೆಯಲಿ ಸುತ್ತುವಂತೆ ನೀ ಮಾಡುತ್ತೀ,

ಹೂ ಹಣ್ಣಾಗುವಂತೆ ಮಾಡುತ್ತೀ,
ಮೊಗ್ಗು ಅರಳುವಂತೆ ಮಾಡುತ್ತೀ,
ಪ್ರೊಟಾನ್‌ಗಳು ಮತ್ತು ಎಲಾಕ್ಟ್ರಾನ್‌ಗಳು
ನಿನ್ನ ಇಚ್ಛಾ ರಾಗಕ್ಕನುಗುಣವಾಗಿ
ಕುಣಿಯುತ್ತವೆ. ನಿನ್ನ ಇಚ್ಛೆ ನೆರವೇರಲಿ."

ಆದರೆ ದೇವರ ಇಚ್ಛೆ ನೆರವೇರುವ ಮುನ್ನ ಮನುಷ್ಯನು ಬಹಳಷ್ಟು ಪರಿಶ್ರಮಿಸ ಬೇಕಾಗುತ್ತದೆ ಮತ್ತು ತನ್ನ ಇಚ್ಛೆಯನ್ನು ಶೂನ್ಯವನ್ನಾಗಿ ಮಾಡಬೇಕಾಗುತ್ತದೆ. ಆದ್ದರಿಂದ ಪ್ರತಿಯೊಂದು ಧರ್ಮವು ತನ್ನ ಅನುಯಾಯಿಗಳಿಗೆ "ನಿನ್ನಲ್ಲಿ ಪರಮಾತ್ಮ ನೆಲಸಬೇಕಾದರೆ ನಿನ್ನನ್ನು ನೀನು ಜೀವಚ್ಛವವಾಗಿ ಮಾಡಿಕೊ" ಎಂದು ಆಜ್ಞಾಪಿಸುತ್ತದೆ. ಸ್ವಪ್ರತಿಷ್ಠೆಯ ಆವರಣವು ದೈವಿಕ ನಿತಾಂತ ಸ್ಮರಣೆಯಿಂದ ವಂಚಿತನನ್ನಾಗಿ ಮಾಡುತ್ತದೆ. ಅವನ ಅಹಂಭಾವವು ಕಡಿಮೆಯಾದಂತೆಲ್ಲ ಅವನ ಜೀವನದಲ್ಲಿ ದೇವತ್ವವು ಹೆಚ್ಚು ಹೆಚ್ಚಾಗಿ ಪ್ರತಿಫಲಿಸುತ್ತದೆ. ಆದ್ದರಿಂದಲೇ ಗಾಂಧೀಜಿ ತಮ್ಮ ಜೀವಿತದ ಪ್ರತಿಯೊಂದು ಅಂಗದಲ್ಲಿ ಪರಮಾತ್ಮನ ಇರುವಿಕೆಯ ಜಾಗ್ರತಾವಸ್ಥೆಗಾಗಿ ಕೊನೆಯಿಲ್ಲದ ಹಂಬಲವಿರಿಸಿಕೊಂಡಿದ್ದರು. ಗುರುದೇವರು ತಮ್ಮ ಪವಿತ್ರ ಕವಿತೆ, "ಓ ದೇವರೆ ನಿನ್ನಿಂದ ನಾನು ಪುನಶ್ಚೇತನವನ್ನು ಪಡೆಯುವಂತಾಗಲಿ ಮತ್ತು ನಿನ್ನಿಂದ ಮಾರ್ಗದರ್ಶನ ಪಡೆಯುವಂತಾಗಲಿ" ಎಂಬ ಪದ್ಯದಲ್ಲಿ ಹೀಗೆ ಪ್ರಾರ್ಥಿಸಿದ್ದಾರೆ:-

" ಓ ದೇವರೆ ನಾನು ನಿನ್ನ ಸೇವಕನಲ್ಲದೆ ಮತ್ತೆ ಯಾರೂ ಅಲ್ಲ. ನನ್ನ ಎಲ್ಲ ಆಶೆಗಳನ್ನು ನೀನಲ್ಲದೆ ಬೇರಾರೂ ಈಡೇರಿಸಲಾರರು. ನಾನೆನೆಲ್ಲವನ್ನು ಹೊಂದಿದ್ದೇನೆಯೋ ಅವನ್ನು ನಿನ್ನಿಂದಲೇ ಪಡೆದಿದ್ದೇನೆ. ಆದಾಗ್ಯೂ ಇನ್ನೂ ಬೇಕೆಂಬ ತೃಷೆ ಮಾತ್ರ ಇಂಗಿಲ್ಲ. ಸದಾ ನಿನ್ನ ಸಹವಾಸವಿರಲೆಂಬ ನನ್ನ ಬೇಡಿಕೆಯನ್ನು ಕೈಗೂಡಿಸು. ಯಾವುದು ಸರಿಯೆಂಬುದು ನಿನಗೆ ತಿಳಿಯದೇ ಇಲ್ಲ. ಅಂದ ಮೇಲೆ ನಾನೇಕೆ ನಿನ್ನ ಆದೇಶವನ್ನು ಪ್ರಶ್ನಿಸಲಿ? ನೀ ಮಾಡುವುದೆಲ್ಲ ನನ್ನ ಉದ್ಧಾರಕ್ಕಾಗಿ. ಆದ್ದರಿಂದ ನಾನೇಕೆ, ದೇವರೆ, ನಿರಾಶಗೊಳ್ಳಬೇಕು?

ಗಾಂಧೀಜಿ ಮತ್ತು ಗುರುದೇವರು ಬ್ರಹ್ಮ ಚರ್ಯವೆಂಬ ಮೌಲ್ಯದಲ್ಲಿ ಅಪಾರ ನಂಬಿಕೆಯಿರಿಸಿಕೊಂಡಿದ್ದರು. ಏಕೆಂದರೆ ಅವರು ಬಾಲ್ಯದಿಂದಲೇ ಜೀವನದ ಅಂತಿಮ ಗುರಿ ಶಾಶ್ವತವಾದ ಬ್ರಹ್ಮನಲ್ಲಿ ವಾಸಿಸುವುದು ಎಂದು ತಿಳಿದಿದ್ದರು. ಪ್ರೇಮ ಮತ್ತು ಸೌಂದರ್ಯ ಬ್ರಹ್ಮನ ಎರಡು ಮುಖ್ಯ ಪಾರ್ಶ್ವಗಳು. ಅವುಗಳನ್ನು ಗ್ರಹಿಸಬೇಕಾದರೆ ಕಠೋರ ಸ್ವಯಂಶಿಸ್ತನ್ನು ಪಾಲಿಸ ಬೇಕಾಗುತ್ತದೆ. ಸೌಂದರ್ಯಕ್ಕೂ, ಸ್ವಯಂ ಶಿಸ್ತಿಗೂ ಯಾವುದೇ ಸಂಬಂಧವಿಲ್ಲವೆಂದು ಜನರು ಸಾಮಾನ್ಯವಾಗಿ ಭಾವಿಸುತ್ತಾರೆ. ಆದರೆ ಇದೊಂದು ಭಾರಿ ತಪ್ಪು. ಸತ್ಯವು ಕೂಡ ಸ್ವಯಂ ನಿಯಂತ್ರಣದ ಮೇಲೆ ಆಧರಿಸಿದೆ.

ಕಲಾಕಾರನು ಮಾತ್ರ ಸತ್ಯವನ್ನು ಶ್ರುತಿಯೆಂದು ಕರೆಯುತ್ತಾನೆ. ಆದರೆ ಸತ್ಯದ ಶೋಧಕ ಅದನ್ನು ಸಂಯಮದ ನಿಯಮವೆಂದು ಗುರುತಿಸುತ್ತಾನೆ.

ಹೀಗೆ ಗಾಂಧೀಜಿ ಮತ್ತು ಗುರುದೇವ ಇಬ್ಬರೂ ಬ್ರಹ್ಮಚರ್ಯಾಧಾರಿತ ಜೀವನದಲ್ಲಿ ಸಂಯಮದ ಸ್ಥಾನವನ್ನು ತಿಳಿದಿದ್ದರು. ಗುರುದೇವರು ಬ್ರಹ್ಮಚರ್ಯವನ್ನು ಸೌಂದರ್ಯದಲ್ಲಿಯ ನಿನಾದದ ಮೂಲಕ ಬೆಳೆಸಿಕೊಂಡಿದ್ದರೆ, ಗಾಂಧೀಜಿ ಕಟ್ಟು ನಿಟ್ಟಾದ ನಡತೆಯನ್ನೂ ಹಾಗೂ ಅದರ ಪೂರಕಗಳಾದ ವ್ರತಗಳನ್ನೂ, ಉಪವಾಸವನ್ನೂ ಆಚರಿಸಿದರು. ಅಂತ್ಯದಲ್ಲಿ ಅವರಿಬ್ಬರೂ ಪ್ರಜ್ಞಾಪೂರ್ವಕವಾಗಿ ದೇವರ ಸಾಮ್ರಾಜ್ಯವನ್ನು ಪ್ರವೇಶಿಸಿದರು. ನಿರಂತರವಾದ ಭೋಗ ಜೀವನವು ವ್ಯಕ್ತಿಯ ಜೀವನವಿಧಾನದ ಮೇಲೆ ಉಂಟಾಗಬಹುದಾದ ಭಗವಂತನ ಪ್ರಭಾವವನ್ನು ಮರೆಮಾಚಿಸುತ್ತದೆ. ಆಗ ಆ ವ್ಯಕ್ತಿಯು ಭಗವಂತನಿಂದ ದೂರದೂರಕ್ಕೆ ಸರಿದುಹೋಗುತ್ತಾನೆ. ಆದ್ದರಿಂದ ಅವನು ಸೌಂದರ್ಯವನ್ನಾಗಲೀ, ಸತ್ಯವನ್ನಾಗಲೀ ಎಂದೋ ಒಂದು ಸಲ ನೋಡುತ್ತಾನೆ ಅಥವಾ ಎಂದಿಗೂ ನೋಡುವುದೇ ಇಲ್ಲ. ಪೂಜೆಯ ಕಲೆ ಮತ್ತು ಸೌಂದರ್ಯ ದೃಷ್ಟಿಗಳು ಆತ್ಮಜ್ಞಾನ ಪಡೆಯುವ ಮಾರ್ಗಗಳಲ್ಲಿ ಒಂದು ವಿಧಾನ ಎಂದು ಗುರುದೇವ ಭಾವಿಸಿದ್ದರು. ಆದರೆ ಎಲ್ಲಿಯ ವರೆಗೆ ರಾಜಸಿಕ ಆತ್ಮವನ್ನು ದೃಢವಾದ ಮನಸ್ಸಿನಿಂದ ನಿಯಂತ್ರಿಸುವುದಿಲ್ಲವೊ ಅಲ್ಲಿಯವರೆಗೆ ಸಾತ್ವಿಕ ಆತ್ಮದ ಅಥವಾ ಭಗವಂತನ ದರ್ಶನವಾಗಲಾರದು ಮತ್ತು ವ್ಯಕ್ತಿ ತದನುಸಾರ ತನ್ನನ್ನು ಪರಿವರ್ತಿಸಿಕೊಳ್ಳಲಾರ.

ಸಂಗೀತದ ಬಗ್ಗೆ ಅಭಿರುಚಿಯಿಲ್ಲದಿರುವ ಮನುಷ್ಯ ಸಾಮಾನ್ಯವಾಗಿ ಕುಟಿಲ ಅಥವಾ ಠಕ್ಕನಾಗಿರುತ್ತಾನೆಂದು ಓರ್ವ ಇಂಗ್ಲಿಷ್ ಕವಿ ಹೇಳಿಲ್ಲವೆ? ಅದೇಕೆ ಹೀಗೆಂದರೆ ಅವನು ಆತ್ಮದ ಶ್ರುತಿಯ ಬಗ್ಗೆ ಇರಬೇಕಾದ ಸೂಕ್ಷ್ಮ ಭಾವನೆಯನ್ನು ಹೊಂದಿರುವುದಿಲ್ಲ. ಓರ್ವ ಸಂತ ಹೊಂದಿರುವಂಥ ದೈಹಿಕ ಮತ್ತು ಮಾನಸಿಕ ಶಿಸ್ತು ಸೌಂದರ್ಯದ ಆತ್ಮವನ್ನೂ, ಆತ್ಮದ ಸೌಂದರ್ಯವನ್ನೂ ತಿಳಿಯಲು ಅಗತ್ಯ. ಆದ್ದರಿಂದ ಸಂತನೂ ಮತ್ತು ಕಲಾಕಾರನೂ ಚೇತನದ ಅವಳಿ–ಜವಳಿಗಳು. ಇಬ್ಬರೂ ಚೇತನದ ಪ್ರಕಾಶವನ್ನು ನೋಡುತ್ತಾರೆ. ಇತ್ತೀಚಿಗಿನ ದಿನಗಳಲ್ಲಿ ಸಂಯಮದ ಕೊರತೆ ದುಃಖ ತರುವಷ್ಟೂ ಇದೆ. ಜನರು ಅಂತರಾತ್ಮನ ಧ್ವನಿಯ ಬಗ್ಗೆಯೂ, ಸ್ಪಂದನೆಯ ಬಗ್ಗೆಯೂ ಉದಾಸೀನತೆ ಬೆಳೆಸಿಕೊಂಡಿದ್ದಾರೆ. ಅಂತೆಯೇ ಜೀವನದಲ್ಲಿಯ ಸತ್ಯ ಮತ್ತು ಸೌಂದರ್ಯದ ಬಗ್ಗೆ ಕೂಡ. ಎಲ್ಲೆಲ್ಲಿಯೂ ನಿಗೂಢ ವಿಧ್ವಂಸಕತೆ ಇರುವಂತೆ ಭಾಸವಾಗುತ್ತದೆ.

–ಅನು–ಸು.ಕೌ.

* * *

ಜನಪದ ವ್ಯಕ್ತಿ

ಪ್ಯಾರೇಲಾಲ್

ಗಾಂಧೀ ಸಾಹಿತ್ಯವನ್ನು ಓದಿದವರಿಗೆ ಪ್ಯಾರೇಲಾಲ್‌ರ ಹೆಸರು ಗೊತ್ತಿರಲೇಬೇಕು. ಪ್ಯಾರೆಲಾಲ್ ಮತ್ತು ಮಹದೇವ ದೇಸಾಯಿಯವರಂಥ ನಿಷ್ಠಾವಂತ ಸೇವಕರು ಗಾಂಧೀಜಿಯವರಿಗೆ ದೊರೆಯದೆ ಹೋಗಿದ್ದರೆ ಅವರಿಗೆ ಮಹಾತ್ಮ ಎಂಬ ಗೌರವವಾಚಕ ಪದ ಚಿರಸ್ಥಾಯಿಯಾಗಿ ಉಳಿಯುತ್ತಿತ್ತೆ ಹೇಗೆ ಎಂಬಷ್ಟರ ಮಟ್ಟಿಗೆ ಇವರಿಬ್ಬರ ಸೇವೆ ಮಹತ್ವದ್ದಾಗಿದೆ. ಮಹದೇವ ದೇಸಾಯಿ ಗಾಂಧೀಜಿಯವರ ಒಂದು ಕಣ್ಣಾಗಿದ್ದರೆ, ಪ್ಯಾರೇಲಾಲ್‌ರು ಇನ್ನೊಂದು ಕಣ್ಣಾಗಿದ್ದರು. ಪ್ಯಾರೇಲಾಲ್‌ರು ತುಂಬಾ ಸುಸಂಸ್ಕೃತ ವ್ಯಕ್ತಿಯಾಗಿದ್ದರು. ಆದ್ದರಿಂದಲೆ ಅವರು ಗಾಂಧೀಜಿಯವರ ಜನ್ಮದಿಂದ ಹಿಡಿದು ಅವರ ಬಾಲ್ಯ ಮತ್ತು ಯೌವನಾವಸ್ಥೆ ಸೇರಿದಂತೆ, ಗಾಂಧೀಜಿ ದಕ್ಷಿಣ ಆಫ್ರಿಕಾದಿಂದ ೧೮೯೬ನೇ ಇಸವಿಯಲ್ಲಿ ಭಾರತಕ್ಕೆ ಅಲ್ಪಾವಧಿಗಾಗಿ ಭೇಟಿಕೊಟ್ಟ ಘಟನೆಯವರಿಗೆ ಬರೆದ ಮೊದಲನೆ ಸಂಪುಟವಾದ 'ದಿ ಅರ್ಲಿ ಫೇಸ್' ಎಂಬ ೮೦೬ ಪುಟಗಳ ಬೃಹತ್ ಗ್ರಂಥವನ್ನು ಅವರು ತಮ್ಮ ಋಷಿಸಮಾನರಾಗಿದ್ದ ತಾಯಿ ಮತ್ತು ಅಣ್ಣನ ಆಶೀರ್ವಾದಕ್ಕಾಗಿ ಎಂಬ ಹೆಸರಿನಲ್ಲಿ ಅರ್ಪಿಸಿದ್ದಾರೆ. ಇದು ಪ್ಯಾರೆಲಾಲ್‌ರ ವಿನೀತ ಸ್ವಭಾವವನ್ನು, ಮಾತೃ ಗೌರವವನ್ನು ತೋರಿಸುತ್ತದೆ. ಇಂಥ ಸಾತ್ವಿಕ ವ್ಯಕ್ತಿ ಗಾಂಧೀಜಿಯವರ ಸೇವೆಗೆ ಸೇರಿದಾಗ ಕೇವಲ ೨೦ ವರ್ಷದ ಯುವಕ. ಇಂಗ್ಲೀಷ್ ಸಾಹಿತ್ಯದಲ್ಲಿ ಪಾಂಡಿತ್ಯವನ್ನು ಸಂಪಾದಿಸಿ ಎಂ. ಎ ಪದವಿಯನ್ನು ಪಡೆಯುವತ್ತ ಹೆಜ್ಜೆ ಹಾಕುತ್ತಿದ್ದಾಗ ದೇಶದಲ್ಲಿ ಉಂಟಾದ ಅಸಹಕಾರ ಚಳುವಳಿಯ ಗಾಳಿ ಪ್ಯಾರೆಲಾಲ್‌ರನ್ನು ತಟ್ಟದೆ ಇರಲಿಲ್ಲ. ಆ ಗಾಳಿ ಅವರನ್ನು ೧೯೧೯ ರಲ್ಲಿ ಅಮೃತಸರದಲ್ಲಿ ನಡೆಯುತ್ತಿದ್ದ ಕಾಂಗ್ರೆಸ್ ಅಧಿವೇಶನಕ್ಕೆ ಕರೆದೊಯ್ಯಿತು. ಅಲ್ಲಿಗೇ ಅವರ ಕಾಲೇಜು ವಿಧ್ಯಾಭ್ಯಾಸ ಮುಕ್ತಾಯವಾಯಿತು. ಆದರೆ ಮಹಾಸಾಗರದಂತಿದ್ದ ಗಾಂಧೀ ಎಂಬ ವಿಶ್ವವಿದ್ಯಾನಿಲಯದ ವಿದ್ಯಾರ್ಥಿಯಾಗಿಬಿಟ್ಟರು. ಆ ಕಾಂಗ್ರೆಸ್ ಅಧಿವೇಶನದಲ್ಲಿ ಗಾಂಧಿಯವರ ಭಾಷಣ ಕೇಳಿದರು. ಆ ಭಾಷಣದಲ್ಲಿ ಪ್ಯಾರೆಲಾಲ್‌ರು ತಮಗೆ ಬೇಕಾದ ನಿಜವಾದ ಗುರುವನ್ನು ಕಂಡರು ಮತ್ತು ಸೇವೆಗೆ ಯೋಗ್ಯವಾದ ವ್ಯಕ್ತಿ ಇವರೇ ಎಂದು ನಿಶ್ಚಯಿಸಿದರು. ಆ ದಿನದಿಂದ ಅವರು ಗಾಂಧಿಯ ಸಹವಾಸದಲ್ಲಿ ೨೮ ವರ್ಷಗಳ ಕಾಲ ತೊಡಗಿಸಿಕೊಂಡರು. ಗಾಂಧೀಜಿಯವರ ಸೇವಾಕ್ಷೇತ್ರ ಬಹುಮುಖಿಯಾಗಿತ್ತು. ಆದ್ದರಿಂದ ಪ್ಯಾರೇಲಾಲ್‌ರ ಕಾರ್ಯಕ್ಷೇತ್ರವು ಬಹುಮುಖಿಯಾಯಿತು. ಅಡುಗೆ ಮನೆಯ ಕೆಲಸದಿಂದ ಪ್ರಾರಂಭಿಸಿ 'ಯಂಗ್ ಇಂಡಿಯಾ', 'ಹರಿಜನ' ಪತ್ರಿಕೆಗಳ ಸಂಪಾದಕತ್ವದವರೆಗೆ ಕೆಲಸ ಮಾಡಬೇಕಾಯಿತು. ಅಲ್ಲದೆ, ಗಾಂಧೀಜಿಯವರ ಆಶ್ರಮಕ್ಕೆ ಬರುತ್ತಿದ್ದ ಹೊಸಬರಿಗೆ ನೂಲುವುದನ್ನು ಕಲಿಸುವುದು, ಸತ್ಯಾಗ್ರಹಕ್ಕಾಗಿ ಮಾರ್ಗದರ್ಶನ ಮಾಡುವುದು ಇತ್ಯಾದಿಗಳೆಲ್ಲವೂ ಪ್ಯಾರೇಲಾಲರ ಪಾಲಿಗೆ ಬಂದ ಕೆಲಸಗಳಾದವು. ಈ ಪ್ರತಿಯೊಂದು ಕೆಲಸದಲ್ಲಿ ಅವರು ಗಾಂಧಿ ನಿಷ್ಠೆಯನ್ನೆ, ಗಾಂಧಿ ಶ್ರದ್ಧೆಯನ್ನೆ ತೋರಿಸಿದರು. ಫಲವಾಗಿ

ಗಾಂಧೀಜಿಯವರು ನಡೆಸಿದ ಪ್ರತಿಯೊಂದು ಸತ್ಯಾಗ್ರಹದಲ್ಲಿ ಪ್ಯಾರೆಲಾಲ್‌ರ ಪಾತ್ರ ಇದ್ದೇ ಇತ್ತು. ೧೯೪೮ರ ಜನವರಿ ೩೦ ರಂದು ಗಾಂಧೀಜಿಯವರ ಹತ್ಯೆಯೊಂದಿಗೆ ಪ್ಯಾರೆಲಾಲರ ಗಾಂಧಿ ಸೇವೆ ಅಂತ್ಯಗೊಂಡಿತು. ಪ್ಯಾರೇಲಾಲರದು ಗಾಂಧೀಜಿಯವರೊಂದಿಗಿನ ಸೇವೆ ಕೇವಲ ದೈಹಿಕ ಮತ್ತು ಭೌತಿಕ ಸೇವೆಯಾಗಿರದೆ ವೈಚಾರಿಕ ಸೇವೆಯೂ ಆಗಿತ್ತು. ಜಿನ್ನಾರ ಎರಡು ದೇಶದ ಸಿದ್ಧಾಂತವನ್ನು ಗಾಂಧೀಜಿ ಎಂದೂ ಒಪ್ಪಿರಲಿಲ್ಲ. ಧರ್ಮವನ್ನು ಬದಲಾಯಿಸುವುದರಿಂದ ರಾಷ್ಟ್ರೀಯತೆ ಬದಲಾಗುವುದಿಲ್ಲವೆಂದು ಗಾಂಧಿ ಮನಸಾರೆ ನಂಬಿದ್ದರು. ಆದರೆ ಜಿನ್ನಾರ ಮನವೊಲಿಸಲು ಗಾಂಧೀಜಿಯವರಿಗೆ ಸಾಧ್ಯವಾಗಲಿಲ್ಲ. ಇಸ್ಲಾಂ ಧರ್ಮವನ್ನು ಕೆಲ ಭಾರತೀಯರು ಅಂಗೀಕರಿಸಿದ ಮಾತ್ರಕ್ಕೆ ಅವರು ಬೇರೆ ದೇಶಿಗರಾಗುವುದಿಲ್ಲವೆಂದು ಹೇಳಿದ ಗಾಂಧೀಜಿಯವರ ಮಾತನ್ನು ಜಿನ್ನಾ ಒಪ್ಪಲಿಲ್ಲ. ದೇಶದ ವಿಭಜನೆ ತಪ್ಪಲಿಲ್ಲ. ದೇಶದ ವಿಭಜನೆಯ ದುಷ್ಪರಿಣಾಮವನ್ನು ಹಿಂದೂ ಮತ್ತು ಮುಸ್ಲಿಮರ ಮಧ್ಯದಲ್ಲಿಯ ದ್ವೇಷ ಮತ್ತು ಅಪನಂಬಿಕೆಯನ್ನು ನಿವಾರಿಸುವುದರ ಮೂಲಕ ತಪ್ಪಿಸಬಹುದೆಂಬ ಆಸೆಯನ್ನು ಗಾಂಧೀಜಿ ಇಟ್ಟುಕೊಂಡಿದ್ದರು. ಆದರೆ ಆದದ್ದೆ ಬೇರೆ. ವಿಭಜನೆಯ ಮುನ್ನ ಉಂಟಾದ ಜನಾಂಗೀಯ ಘರ್ಷಣೆಗಳ ಕಾರಣದಿಂದ ಗಾಂಧೀಜಿ ಆಗಿನ ಪೂರ್ವ ಬಂಗಾಳದ ನೌಖಾಲಿಗೆ ಹೋಗಬೇಕಾಯಿತು. ಪ್ಯಾರೇಲಾಲರು ಕೂಡ ಅವರ ನೆರಳಿನಂತೆ ನೌಖಾಲಿಗಿ ಹೋದರು. ಪ್ಯಾರೇಲಾಲರು ಗಾಂಧೀಜಿಯ ಆಪ್ತ ಕಾರ್ಯದರ್ಶಿಯಷ್ಟೆ ಆಗಿರಲಿಲ್ಲ. ಅವರ ಮಗನೇ ಆಗಿದ್ದರು. ಕಲ್ಕತ್ತಾ ನಗರವೂ ಕೂಡ ಕೋಮು ವೈಷಮ್ಯದ ದಳ್ಳುರಿಯಲ್ಲಿ ಬೇಯುತ್ತಿತ್ತು. ಅಲ್ಲಿಯ ಬೆಂಕಿಯನ್ನು ಆರಿಸುವುದಕ್ಕಾಗಿ ಗಾಂಧೀಜಿ ಕಲ್ಕತ್ತಾಗೆ ಹೋದರು. ಅಲ್ಲಿ ಗಾಂಧೀಜಿ ಶಹೀದ್ ಸುಹರವರ್ಧಿಯವರ ಮನೆಯಲ್ಲಿದ್ದುಕೊಂಡೆ ಉಪವಾಸ ಪ್ರಾರಂಭಿಸಿದರು. ಗಾಂಧೀಜಿಯವರ ಈ ಅಗ್ನಿ ಪರೀಕ್ಷಾ ಕಾಲದಲ್ಲಿ ಪ್ಯಾರೆಲಾಲರು ಮಾಡಿದ ಕೆಲಸ ಅಸಾಮಾನ್ಯವಾದುದು. ಗಾಂಧಿಯವರ ಉಪವಾಸದ ಪರಿಣಾಮ ಒಳ್ಳೆಯ ಫಲವನ್ನು ಪಡೆಯುವುದಕ್ಕೆ ಪ್ಯಾರೇಲಾಲರು ಬಹಳಷ್ಟು ಕಾರಣರಾದರು. ಹಿಂದೂ ಮುಸ್ಲಿಂರಲ್ಲಿ ಪಶ್ಚಾತ್ತಾಪ ಭಾವನೆ ಮೂಡಿತು. ಐಕ್ಯತೆ ಉಂಟಾಯಿತು. ಶಾಂತಿ ಸ್ಥಾಪಿತಗೊಂಡಿತು. ಲಾರ್ಡ್ ಮೌಂಟ್ ಬ್ಯಾಟನ್ ದಂಗಾದರು. ಅದನ್ನು ಅವರು 'ಕಲ್ಕತ್ತ ಚಮತ್ಕಾರ' ಎಂದು ಹೆಸರಿಸಿದರು. ಮೌಂಟ್ ಬ್ಯಾಟನ್ ಗಾಂಧೀಜಿಯವರನ್ನು ಏಕವ್ಯಕ್ತಿ ಗಡಿ ಸೇನೆ ಎಂದು ಕರೆದರು. ಹೀಗೆ ಪ್ಯಾರೇಲಾಲರು ತಮ್ಮನ್ನು ಸವೆಸಿ ತಮ್ಮ ಗುರುವಿನ ಯಶೋಗಾಥೆಯನ್ನು ಬರೆದರು.

ಗಾಂಧೀಜಿಯವರ ಹತ್ಯೆಯ ನಂತರ ಪ್ಯಾರೇಲಾಲರು ಗಾಂಧೀಜಿಯವರ ಸಮಗ್ರ ಜೀವನ ಚರಿತ್ರೆಯನ್ನು ಬರೆಯಲು ನಿಶ್ಚಯಿಸಿದರು. ಆ ಜೀವನ ಚರಿತ್ರೆಯ ಮೂಲಕ ಗಾಂಧೀಜಿಯವರ ಸಂದೇಶ ಎಲ್ಲೆಡೆ ಹಬ್ಬುವಂತೆ ಮಾಡಬೇಕೆಂದು, ಅನ್ಯಾಯ ಮತ್ತು ದಬ್ಬಾಳಿಕೆಯ ವಿರುದ್ಧ ಹೋರಾಡಲು ಹಿಂಸೆಗೆ ಪರ್ಯಾಯವಾದ ಅಹಿಂಸಾ ಮಾರ್ಗವನ್ನು ತೋರಿಸಬೇಕೆಂದು ಬಯಸಿದರು. ಪ್ಯಾರೇಲಾಲರ ಈ

ಯೋಜನೆಯ ಬಗ್ಗೆ ಗಾಂಧೀಜಿಯವರ ನಿಕಟವರ್ತಿಗಳಾಗಿದ್ದ ಪ್ರಧಾನಮಂತ್ರಿ ಜವಾಹರಲಾಲ್ ನೆಹರು, ಉಪ ಪ್ರಧಾನಿ ಸರ್ದಾರ್ ವಲ್ಲಭಭಾಯಿ ಪಟೇಲ್, ಪ್ರಥಮ ಅಧ್ಯಕ್ಷ ಡಾ॥ ರಾಜೇಂದ್ರ ಪ್ರಸಾದ್ ಇವರೆಲ್ಲರು ತುಂಬಾ ಆಸಕ್ತಿ ತೋರಿಸಿದರು. ಈ ಕೆಲಸಕ್ಕಾಗಿ ಅವರ ಕಛೇರಿಗೆಂದು ಸ್ಥಳವನ್ನು ಕೊಟ್ಟರು ಮತ್ತು ಜೀವನ ಚರಿತ್ರೆ ಬರೆಯಲು ಅಗತ್ಯವಾದ ಮಾಹಿತಿ ಸಂಗ್ರಹಣೆಗಾಗಿ ಓಡಾಡುವುದಕ್ಕೆ ಅನುಕೂಲವಾಗಲೆಂದು ರೈಲ್ವೆಯ ಪ್ರಥಮ ದರ್ಜೆ ಪಾಸನ್ನು ಒದಗಿಸಿದರು. ಅಷ್ಟೆ ಅಲ್ಲ, ಇನ್ನು ಬೇಕಾದ ಬೇರೆಲ್ಲ ಅನುಕೂಲತೆಗಳನ್ನು ಮಾಡಿಕೊಡುವುದಾಗಿ ಹೇಳಿದರು. ಆದರೆ ಗಾಂಧೀಜಿಯವರ ನಿಜವಾದ ಅನುಯಾಯಿಯಾಗಿದ್ದ ಪ್ಯಾರೇಲಾಲರು ಗಾಂಧೀಜಿಯವರ ರೀತಿಯ ಜೀವನವನ್ನೆ ನಡೆಸಿದರು. ಅತ್ಯಂತ ಕಡಿಮೆ ಖರ್ಚಿನಲ್ಲಿ ಅತ್ಯಂತ ಅಗಾಧವಾದ ಕೆಲಸ ಮಾಡಿದರು. ಹತ್ತು ಜನ ಸೇರಿ ಮಾಡಬೇಕಿದ್ದ ಕೆಲಸವನ್ನು ಒಬ್ಬರೆ ಮಾಡಿದರು. ಅವರು ಸ್ವಭಾವತಃ ಏಕಾಂಗಿ ಕೆಲಸಗಾರ. ಆದ್ದರಿಂದ ಮೂರು ಸಾವಿರ ಪುಟಗಳ ನಾಲ್ಕು ಸಂಪುಟಗಳನ್ನು ಮಾತ್ರ ಪ್ರಕಟಿಸಲು ಅವರಿಗೆ ಸಾಧ್ಯವಾಯಿತು. ಐದನೆ ಸಂಪುಟದ ಹಸ್ತಪ್ರತಿಗಳು ಸಿದ್ಧವಾಗಿದ್ದವು. ಆದರೆ ವಿಧಿಯ ಆಸೆಯೆ ಬೇರೆಯಾಗಿತ್ತು. ಅವರು ೧೯೮೨ ಅಕ್ಟೋಬರ್ ೨೭ ರಂದು ತೀರಿಕೊಂಡರು. ತಮ್ಮ ಜೀವನದ ಕೊನೆಯ ದಿನವಾಗಿದ್ದ ೨೬ ರಂದು ಕೂಡ ಇಡೀ ದಿನ ಕೆಲಸ ಮಾಡಿದ್ದರು. ಮಾರನೆಯ ದಿನ ಬೆಳಗಿನ ಜಾವ ಹೃದಯಾಘಾತವಾಗಿ ಮಧ್ಯಾಹ್ನದ ಹೊತ್ತಿಗೆ ಇಲ್ಲವಾದರು. ಅವರು ಗಾಂಧೀಜಿಯವರ ಕೊನೆಯ ದಿನಗಳನ್ನು ಕುರಿತು ಬರೆಯಲು ಪ್ರಾರಂಭಿಸಿದ್ದರು. ಏಕೆಂದರೆ ಅಂದಿನ ಘಟನೆಗಳೆಲ್ಲ ಪ್ಯಾರೇಲಾಲರ ಮನಸ್ಸಿನಲ್ಲಿ ಅಚ್ಚಳಿಯದೆ ಉಳಿದಿದ್ದವು. ಅಲ್ಲದೆ, ಗಾಂಧೀಜಿ ೧೯೪೪ ಮೇ ೨ ರಂದು ಆಘಾಖಾನ್ ಬಂಧಿಖಾನೆಯಿಂದ ಬಿಡುಗಡೆಯಾಗಿ ಬಂದ ಮೇಲೆ ೧೯೪೮ ಜನವರಿ ೩೦ ರಂದು ಹತ್ಯೆಗೊಳಗಾಗುವ ಅವಧಿ ಬಹುಮುಖ್ಯ ಘಟನಾವಳಿಗಳ ಅವಧಿಯಾಗಿತ್ತು. ಈ ಅವಧಿ ಗಾಂಧೀಜಿ ನಂಬಿದ್ದ ಅಹಿಂಸೆ ಮತ್ತು ಸತ್ಯದ ಅಗ್ನಿ ಪರೀಕ್ಷೆಯ ಕಾಲವಾಗಿತ್ತು. ಪ್ಯಾರೇಲಾಲರು ಗಂಧೀಜಿಯವರ ಜೀವನ ಚರಿತ್ರೆಯನ್ನು ಬರೆಯುವುದಕ್ಕಾಗಿ ಇಡೀ ದೇಶವನ್ನೇ ಸುತ್ತಿದರು. ಗಾಂಧೀಜಿಯವರು ಬಾಲಕರಾಗಿದ್ದಾಗ ಅವರನ್ನು ಕಂಡಿದ್ದ, ತಿಳಿದಿದ್ದ ಜನರನ್ನು ಖುದ್ದಾಗಿ ಭೇಟಿ ಮಾಡಿ ವಿಷಯ ಸಂಗ್ರಹಿಸಿದರು. ಇದರ ಫಲವಾಗಿ 'ದಿ ಅರ್ಲಿ ಫೇಸ್' ಎಂಬ ಗ್ರಂಥ ಹೊರಬಂತು. ಗಾಂಧಿ ರಾಮನಾಗಿದ್ದರೆ ಪ್ಯಾರೇಲಾಲರು ಸೇವಕ ಆಂಜನೇಯನಾಗಿದ್ದರು. ಅಂತಲೆ ಗಾಂಧಿಯವರ ಸಾಹಿತ್ಯ ಇರುವವರೆಗೆ ಪ್ಯಾರೇಲಾಲರು ಹೆಸರು ಇದ್ದೇ ಇರುತ್ತದೆ. – *ಸುರೇಂದ್ರ ಕೌಲಗಿ*

* * *

ಜನಪದ ನಿಲಯದ ಅಂತರಂಗದಲ್ಲಿ------೪೭

–ಸುರೇಂದ್ರ ಕೌಲಗಿ



ಜನಪದ ಸೇವಾ ಟ್ರಸ್ಟ್ ಗಾಂಧಿ ವಿಚಾರದ ಸಂಸ್ಥೆ ಎಂಬುದು ಕೇವಲ ಅದರ ಅಂಗರಚನೆಯಲ್ಲಿಯ ಉದ್ದೇಶದ ಮೂಲಕ ಪ್ರಕಟಗೊಂಡಿರದೆ ಟ್ರಸ್ಟಿನ ಪ್ರತ್ಯಕ್ಷ ಕಾರ್ಯಗಳ ಮೂಲಕವೂ ಆ ವಿಚಾರವು ಪ್ರತಿಫಲಿತವಾಗಿದೆ. ಅದು ಹೇಗೆ ಪ್ರತಿಫಲಿತವಾಗಿವೆಯೆಂಬುದನ್ನು ವಿವರಿಸುವ ಮುನ್ನ ೪೫ ವರ್ಷಗಳ ಹಿಂದೆ ಗ್ರಾಮೀಣ ಪ್ರದೇಶದಲ್ಲಿ ಸ್ಥಾಪಿತಗೊಂಡ ಸ್ವಯಂ ಸೇವಾ ಸಂಸ್ಥೆಯೊಂದು ಯಾವ ರೀತಿ ಭಿನ್ನವಾಗಿ ಯೋಚನೆ ಮಾಡುತ್ತಿತ್ತೆಂಬುದನ್ನು ತಿಳಿಯುವುದಕ್ಕೋಸ್ಕರ ಟ್ರಸ್ಟಿನ ನಿಯಮಾವಳಿಯಲ್ಲಿಯ ಉದ್ದೇಶವನ್ನು ಇಲ್ಲಿ ಪ್ರಸ್ತುತ ಪಡಿಸುವುದು ಉಚಿತವೆಂದೆನಿಸುತ್ತದೆ.

"ಸಾಮಾಜಿಕವಾಗಿ, ಆರ್ಥಿಕವಾಗಿ, ಶೈಕ್ಷಣಿಕವಾಗಿ, ಶಾರೀರಕ ದೌರ್ಬಲ್ಯತೆಗಳಿಂದಾಗಿ ಅವಕಾಶದ ಅಭಾವದಿಂದಾಗಿ, ಶೋಷಣೆಯ ಕಾರಣದಿಂದಾಗಿ, ಇತರ ಪ್ರಾಕೃತಿಕ ಏರುಪೇರುಗಳಿಂದಾಗಿ ಹಿಂದುಳಿದಂಥ ವ್ಯಕ್ತಿಗಳ, ಹಳ್ಳಿಗಳ ಮತ್ತು ಸಮುದಾಯಗಳ ಸರ್ವತೋಮುಖ ಅಭಿವೃದ್ಧಿಗೋಸ್ಕರ ಧರ್ಮ, ಜಾತಿ, ಜನಾಂಗ, ಭಾಷೆ, ಪ್ರದೇಶ, ವರ್ಗ ಮತ್ತು ಲಿಂಗಭೇಧಗಳಿಲ್ಲದೆ ಖಾದಿ, ಉಣ್ಣೆ, ರೇಷ್ಮೆ, ಗ್ರಾಮೀಣ ಎಣ್ಣೆ, ಬೆಂಕಿ ಕಡ್ಡಿಯಂತಹ ಅನೇಕ ಪ್ರಕಾರದ ವಿಕೇಂದ್ರಿಕೃತ ಗ್ರಾಮೋದ್ಯೋಗಗಳನ್ನೂ, ಗೃಹ ಕೈಗಾರಿಕೆಗಳನ್ನು ಪ್ರಾರಂಭಿಸಿ ಉದ್ಯೋಗಾವಕಾಶ ಮತ್ತು ತರಬೇತಿಗಳನ್ನು ಕೊಡುವುದರ ಮೂಲಕವೂ, ಸೂಕ್ತ ಶೈಕ್ಷಣಿಕ ಕಾರ್ಯಕ್ರಮಗಳ ಮೂಲಕವೂ, ವ್ಯವಸಾಯ ಮತ್ತು ಅದಕ್ಕೆ ಸಂಬಂಧಿಸಿದ ಅಥವಾ ಹತ್ತಿರವಾಗಿರುವ ಹೈನುಗಾರಿಕೆ ಕೋಳಿ ಸಾಕಾಣಿಕೆ ಮುಂತಾದ ಚಟುವಟಿಕೆಗಳನ್ನು ಕೈಗೊಳ್ಳುವುದರ ಮೂಲಕವೂ, ಹಾಗೂ ಅಭಿವೃದ್ಧಿಗೊಳಿಸುವುದರ ಮೂಲಕವೂ, ಪತ್ರಿಕೆ ಮತ್ತು ಪುಸ್ತಕಗಳ ಪ್ರಕಟಣೆಯ ಮೂಲಕವೂ ಮಹಾತ್ಮ ಗಾಂಧೀಜಿಯವರ ವಿಚಾರಗಳ ಆಧಾರದ ಮೇಲೆ ಕಾರ್ಯಕ್ರಮ ನಡೆಸುವುದೇ ಜನಪದ ಸೇವಾ ಟ್ರಸ್ಟಿನ ಉದ್ದೇಶವಾಗಿದೆ."

ಇನ್ನು ಮೇಲ್ಕಾಣಿಸಿದ ಉದ್ದೇಶಗಳಿಗನುಗುಣವಾಗಿ ಟ್ರಸ್ಟಿನ ಯಾವ ಯಾವ ಕಾರ್ಯಕ್ರಮಗಳು ನಡೆದುಕೊಂಡು ಬಂದಿವೆಯೆಂಬುದನ್ನು ಸ್ಥೂಲವಾಗಿ ನೋಡೋಣ. ಮೊದಲನೆಯದಾಗಿ ಗಾಂಧೀಜಿಯವರಿಗೆ ಅತ್ಯಂತ ಪ್ರಿಯವಾಗಿದ್ದ ಮತ್ತು ಅವರು ಸೂಚಿಸಿದ್ದ ಪ್ರಮುಖ ರಚನಾತ್ಮಕ ಕಾರ್ಯಕ್ರಮಗಳಲ್ಲಿ ಒಂದಾದ

ಹಾಗೂ ಭಾರತದ ರಾಜಕೀಯ ಮತ್ತು ಆರ್ಥಿಕ ವಿಕೇಂದ್ರಿಕರಣದ ಸಂಕೇತವಾದ ಖಾದಿ ಕಾರ್ಯಕ್ರಮವನ್ನು ಟ್ರಸ್ಟ್ ಕೈಗೆತ್ತಿಕೊಂಡಿತು. ಇದು ಸುಮಾರು ೧೯೭೦ರಲ್ಲಿ, ಖಾದಿ ಪ್ರಮಾಣಪತ್ರವನ್ನು ಪಡೆದು ಟ್ರಸ್ಟ್ ಖಾದಿ ಉತ್ಪಾದನೆ ಮತ್ತು ಮಾರಾಟದ ಕಾರ್ಯಕ್ರಮವನ್ನು ನಡೆಸಿಕೊಂಡು ಬಂದಿತು. ಖಾದಿ ಬಟ್ಟೆ ತಯಾರಿಸಲು ಅಗತ್ಯವಾದ ಖಾದಿ ದಾರದ ಉತ್ಪಾದನೆಗೋಸ್ಕರ ಅಂಬರ್ ಚರಕ ಘಟಕವನ್ನು ಮೇಲುಕೋಟೆಯಲ್ಲಿ ಪ್ರಾರಂಭಿಸಲಾಯಿತು.ಈ ಘಟಕವು ಪೂರ್ಣ ಪ್ರಮಾಣದಲ್ಲಿ ನಡೆಯದಿದ್ದರೂ ಸುಮಾರು ೧೫ ಜನ ನೂಲುಗಾರರಿಗೆ ಉದ್ಯೋಗವನ್ನು ಒದಗಿಸಿತು. ಉತ್ಪತ್ತಿಯಾದ ದಾರದಿಂದ ಹೆಗಲ ಚೀಲಗಳನ್ನು ತಯಾರಿಸಲು ಪ್ರಾರಂಭಿಸಲಾಯಿತು. ಈ ಹೆಗಲ ಚೀಲಗಳು "ಮೇಲುಕೋಟೆ ಹೆಗಲ ಚೀಲ"ಗಳೆಂದೇ ಪ್ರಸಿದ್ಧಿ ಪಡೆದವು. ಇದರ ಬೇಡಿಕೆ ಕರ್ನಾಟಕ ರಾಜ್ಯಕ್ಕೆ ಮಾತ್ರ ಸೀಮಿತವಾಗದೆ ಹೊರ ರಾಜ್ಯಕ್ಕೂ ಇದರ ಜನಪ್ರಿಯತೆ ಹೆಚ್ಚಿತು. ಈ ಬ್ಯಾಗುಗಳ ಉತ್ಪಾದನೆಯಿಂದ ೧೦ ರಿಂದ ೧೫ ಜನ ಗ್ರಾಮೀಣ ಮಹಿಳೆಯರಿಗೆ ಉದ್ಯೋಗ ದೊರೆಯಿತಲ್ಲದೆ ಟ್ರಸ್ಟಿಗೂ ಕೂಡ ತಕ್ಕ ಮಟ್ಟಿಗೆ ಆದಾಯವನ್ನೂ ತಂದು ಕೊಟ್ಟಿತು. ಈ ರೀತಿಯ ಹೆಗಲ ಚೀಲವನ್ನು ತಯಾರಿಸುವ ಏಕೈಕ ಕೇಂದ್ರವಾಗಿ ಜನಪದ ಸೇವಾ ಟ್ರಸ್ಟ್ ಪ್ರಸಿದ್ಧಿಯನ್ನು ಪಡೆಯಿತು.

ಮೇಲುಕೋಟೆ ಯಾತ್ರಾಸ್ಥಳವಾಗಿರುವುದರಿಂದ ಇಲ್ಲಿ ಒಂದು ಖಾದಿ ಭಂಡಾರವನ್ನು ಪ್ರಾರಂಭಿಸುವುದರ ಮೂಲಕ ಖಾದಿಬಟ್ಟೆಯ ಮಾರಾಟಕ್ಕೆ ಪ್ರೋತ್ಸಾಹವನ್ನು ಕೊಡಬಹುದೆಂದು ಭಾವಿಸಿ ಟ್ರಸ್ಟಿನ ಆವರಣದಲ್ಲಿ ಖಾದಿ-ಗ್ರಾಮೋದ್ಯೋಗ ಭಂಡಾರವನ್ನು ಪ್ರಾರಂಭಿಸಲಾಯಿತು. ಮೇಲುಕೋಟೆಗೆ ಬರುವ ಯಾತ್ರಾರ್ಥಿಗಳಲ್ಲದೆ ಟ್ರಸ್ಟಿಗೆ ಭೇಟಿ ಕೊಡುವ ಅಭಿಮಾನಿಗಳೂ ಸಹ ಖಾದಿ ಬಟ್ಟೆಯನ್ನು ಖರೀದಿಸಿ ಪ್ರೋತ್ಸಾಹಿಸುತ್ತಿದ್ದರು. ಖಾದಿ ಕೆಲಸವನ್ನು ಕೇವಲ ಮೇಲುಕೋಟೆಗೆ ಸೀಮಿತಗೊಳಿಸದೆ ಪಕ್ಕದ ಗ್ರಾಮಗಳಲ್ಲಿಯೂ ಈ ಕೆಲಸವನ್ನು ಪ್ರಾರಂಭಿಸಬೇಕೆಂಬ ಉದ್ದೇಶವನ್ನಿಟ್ಟುಕೊಂಡು ಆ ನಿಟ್ಟಿನಲ್ಲಿ ಪ್ರಯತ್ನ ಮಾಡಲಾಯಿತು.

ಗಾಂಧೀಜಿಯವರ ವಿಚಾರಕ್ಕೆ ಹತ್ತಿರವಾದ ಇನ್ನೊಂದು ಕಾರ್ಯಕ್ರಮವನ್ನು ಟ್ರಸ್ಟ್ ಕೈಗೆತ್ತಿಕೊಂಡಿದ್ದು ಅಂಗವಿಕಲ ಮಕ್ಕಳ ಸೇವೆ. ಸಾಮಾಜಿಕವಾಗಿ ಅತ್ಯಂತ ಹಿಂದುಳಿದವರ ಏಳಿಗೆಯನ್ನು ಗಾಂಧೀಜಿ ಬಯಸಿದ್ದರು, ಅದನ್ನು ಅವರು 'ಅಂತ್ಯೋದಯ' ಎಂಬ ಹೆಸರಿನಲ್ಲಿ ದೇಶಕ್ಕೆ ಪರಿಚಯಿಸಿದ್ದರು. ಅಂಗವಿಕಲ ಮಕ್ಕಳ ಉದ್ಧಾರದ ಕಾರ್ಯ ಆ ಅಂತ್ಯೋದಯದ ಕಾರ್ಯಕ್ರಮದ ಒಂದು ಭಾಗವಾಗಿತ್ತು. ಟ್ರಸ್ಟಿನ ಈ ಕಾರ್ಯಕ್ರಮದ ಮೂಲಕ ಕರ್ನಾಟಕದ ನೂರಾರು ಅಂಗವಿಕಲ ಮಕ್ಕಳು ಪ್ರಯೋಜನ ಪಡೆದು ಇಂದು ಸಮಾಜದಲ್ಲಿ ಗೌರವಾನ್ವಿತ ವ್ಯಕ್ತಿಗಳಾಗಿದ್ದಾರೆ.

ಅಂಗವಿಕಲ ಮಕ್ಕಳ ಏಳಿಗೆಯ ಈ ಕಾರ್ಯಕ್ರಮದ ಜೊತೆಗೆ

ನೊಂದಿರುವ ಮಹಿಳೆಯರಿಗಾಗಿಯೂ ಟ್ರಸ್ಟ್ ಕಾರ್ಯಕ್ರಮವನ್ನು ಹಮ್ಮಿಕೊಂಡು ಅಂತ್ಯೋದಯದ ವಿಚಾರವನ್ನು ಸಫಲಗೊಳಿಸಲು ಪ್ರಯತ್ನಿಸಿತು.

ಗಾಂಧೀಜಿಯವರ ಕಲ್ಪನೆಯಲ್ಲಿ ಯಾವುದೇ ಒಂದು ಸ್ವಯಂ ಸೇವಾ ಸಂಸ್ಥೆ ಸ್ವಾವಲಂಬಿಯೂ ಮತ್ತು ಜನಾಧಾರಿತವಾಗಿಯೂ ಆಗಿರಬೇಕೆಂಬುದಾಗಿತ್ತು. ಗಾಂಧೀಜಿಯವರ ಸಂಸ್ಥೆಗಳ ಬಗೆಗಿನ ಈ ವಿಚಾರವನ್ನು ಪೂರ್ಣವಾಗಿ ಅಲ್ಲದಿದ್ದರೂ ಬಹು ಮಟ್ಟಿಗೆ ನೆರವೇರಿಸಲು ಟ್ರಸ್ಟ್ ಪ್ರಯತ್ನಿಸಿದೆ. ಟ್ರಸ್ಟ್ ತನ್ನ ಈ ೪೫ ವರ್ಷಗಳ ಸಕ್ರಿಯ ಜೀವನದಲ್ಲಿ ಸರ್ಕಾರಕ್ಕಿಂತ ಸಮಾಜವನ್ನು ಮತ್ತು ತನ್ನ ಸ್ವಂತ ಶ್ರಮವನ್ನು ಅವಲಂಬಿಸಿಕೊಂಡು ಬಂದಿದೆ.

ಗಾಂಧೀಜಿಯವರ ವಿಚಾರಗಳನ್ನು ಜನತೆಗೆ ತಲುಪಿಸಬೇಕೆಂಬ ಉದ್ದೇಶದಿಂದ ಮೊದಲು 'ವಿಚಾರ ಗುಚ್ಛ' ಎಂಬ ಹೆಸರಿನಲ್ಲಿ ಸುಮಾರು ಎಂಟು ವರ್ಷಗಳ ಕಾಲ ಮಾಸ ಪತ್ರಿಕೆಯನ್ನು ಪ್ರಕಟಿಸಿತು. ನಂತರ 'ಜನಪದ ವಿಚಾರ' ಎಂಬ ಮಾಸ ಪತ್ರಿಕೆಯನ್ನು ಕಳೆದ ಎಂಟು ವರ್ಷಗಳಿಂದ ಪ್ರಕಟಿಸುತ್ತಿದೆ, ಅಲ್ಲದೆ ಹಲವಾರು ಪುಸ್ತಕಗಳನ್ನೂ ಪ್ರಕಟಿಸಿದೆ. ೧೯೯೦ ಏಪ್ರಿಲ್ ಮಾಹೇಯಲ್ಲಿ ಮೇಲುಕೋಟೆಯಲ್ಲಿ ಅಖಿಲ ಭಾರತ ಸರ್ವೋದಯ ಸಮಾಜ ಸಮ್ಮೇಳನವನ್ನು ಏರ್ಪಡಿಸುವಲ್ಲಿ ಟ್ರಸ್ಟ್ ಬಹು ಮುಖ್ಯ ಪಾತ್ರ ವಹಿಸಿತು.

ಆಗಾಗ್ಗೆ ಯುವಕರಿಗಾಗಿ ಶಿಬಿರಗಳನ್ನು ನಡೆಸಿ ಅವರಿಗೆ ಗಾಂಧೀ, ವಿನೋಬಾ ಮತ್ತು ಜೆ.ಪಿ. ವಿಚಾರಗಳನ್ನು ತಿಳಿಸಿಕೊಂಡು ಬರಲಾಗುತ್ತಿದೆ. ಈಗ್ಗೆ ಕೆಲಕಾಲದ ಹಿಂದೆ 'ಸಂಪೂರ್ಣ ಕ್ರಾಂತಿ ವಿದ್ಯಾಲಯ' ಎಂಬ ಹೆಸರಿನಲ್ಲಿ ಯುವಕರಿಗಾಗಿ ತಿಂಗಳಿಗೊಂದರಂತೆ ಎಂಟು ಶಿಬಿರಗಳನ್ನು ನಡೆಸಲಾಯಿತು.

ವಿದೇಶದ ವಿದ್ಯಾರ್ಥಿಗಳಿಗೂ ಸುಮಾರು ಎಂಟು ಶಿಬಿರಗಳನ್ನು ನಡೆಸಲಾಗಿದೆ. ಅನೇಕ ವಿದೇಶಿ ಯುವಕರು ಟ್ರಸ್ಟಿನ ಕಾರ್ಯಕ್ರಮದಿಂದ ಹಾಗೂ ವಿಚಾರಗಳಿಂದ ಪ್ರಭಾವಿತರಾಗಿ ಗಾಂಧೀ ವಿಚಾರದ ಬಗ್ಗೆ ಆಸಕ್ತಿಯನ್ನು ಹೊಂದಿದರಲ್ಲದೆ ತಮ್ಮ ಜೀವನದಲ್ಲಿ ಹೊಸ ದೃಷ್ಟಿಕೋನವನ್ನು ಕೂಡ ಹೊಂದಿದರು. ಈ ಮಾತುಗಳಿಗೆ ವಿದೇಶಿ ಯುವಕರು ಆಗಾಗ್ಗೆ ಬರೆಯುವ ಪತ್ರಗಳೇ ಸಾಕ್ಷಿಯಾಗಿವೆ.

ಗಾಂಧೀಜಿಯವರ ರಚನಾತ್ಮಕ ಕಾರ್ಯಕ್ರಮಗಳಲ್ಲಿ ವಯಸ್ಕರ ಶಿಕ್ಷಣ ಕೂಡ ಒಂದು. ಆದ್ದರಿಂದ ಟ್ರಸ್ಟ್ ಸುಮಾರು ಒಂದು ವರ್ಷ ಕಾಲ ಮೇಲುಕೋಟೆಯ ಅಕ್ಕ ಪಕ್ಕದ ತಾಲ್ಲೂಕುಗಳಲ್ಲಿ ಮೂವತ್ತು ವಯಸ್ಕರ ಶಿಕ್ಷಣ ಕೇಂದ್ರಗಳನ್ನು ನಡೆಸಿತು.

ಗಾಂಧೀಜಿಯವರ ಜನ್ಮ ಜಯಂತಿಯ ಸಂದರ್ಭದಲ್ಲಿ ಟ್ರಸ್ಟಿನ ಗಾಂಧೀ ವಿಚಾರ ಪ್ರಣೀತ ಕೆಲವು ಕಾರ್ಯಕ್ರಮಗಳನ್ನು ಸ್ಮರಿಸಿಕೊಳ್ಳುವಾಗ ಮುಂದೆ ಮಾಡಬೇಕಾಗಿರುವ ಕಾರ್ಯಕ್ರಮಗಳ ಬಗ್ಗೆ ಉತ್ಸಾಹವನ್ನು ಮೂಡಿಸುತ್ತದೆ.

(ಮುಂದುವರೆಯುವುದು)

* * *

ಜನಪದ ಸೇವಾ ಟ್ರಸ್ಟ್ ಸಮಾಚಾರ

ಕಳೆದ ೪೫ ವರ್ಷಗಳ ತನ್ನ ಸೇವಾ ಅವಧಿಯಲ್ಲಿ ಜನಪದ ಸೇವಾ ಟ್ರಸ್ಟ್ ಅಭಿಮಾನಿಗಳ ಮತ್ತು ದಾನಿಗಳ ಒಂದು ಬಳಗವನ್ನೇ ಸೃಷ್ಟಿಸಿಕೊಂಡಿದೆ. ಈ ಬಳಗವೇ ಟ್ರಸ್ಟಿನ ಪ್ರಾಣವಾಯು ಎಂದು ಹೇಳಿದರೆ ಅತಿಶಯೋಕ್ತಿಯಾಗಲಾರದು.

ಈ ಬಳಗದೊಂದಿಗೆ ನಿಕಟ ಸಂಪರ್ಕ ಇಟ್ಟುಕೊಳ್ಳುವ ಪ್ರಯತ್ನವನ್ನು ಟ್ರಸ್ಟ್ ಮಾಡಿಕೊಳ್ಳುತ್ತಾ ಬಂದಿದೆ. ಇಂಥ ಪ್ರಯತ್ನಗಳಲ್ಲಿ ಅಭಿಮಾನಿ ಮಿತ್ರರಿಗೆ ಟ್ರಸ್ಟಿನ ಆಗಾಗಿನ ಕಾರ್ಯಕ್ರಮಗಳನ್ನು, ಬೆಳವಣಿಗೆಗಳನ್ನು ತಿಳಿಸುವುದೂ ಒಂದಾಗಿದೆ. ಅಂಥ ಪ್ರಯತ್ನದ ಅಂಗವಾಗಿ ಈ ಸಮಾಚಾರ ವಿಭಾಗ ಇದೆ. ಇದು ಮೊದಲನೆ ಸಮಾಚಾರ ಪತ್ರವಾಗಿರುವುರಿಂದ ಕೆಲವು ಮಹತ್ವದ ಸಂಗತಿಗಳನ್ನು ಮಾತ್ರ ಈಗ ತಿಳಸಲಾಗಿದೆ. ಮುಂದಿನ ತಿಂಗಳುಗಳಲ್ಲಿ ಹೆಚ್ಚಿನ ವಿಷಯಗಳನ್ನು ತಿಳಿಸಲಾಗುವುದು.

ಈ ಸಮಾಚಾರ ಪತ್ರದ ಮುಖ್ಯ ಉದ್ದೇಶ್ಯ ಅಭಿಮಾನಿಗಳಿಗೂ, ದಾನಿಗಳಿಗೂ ಟ್ರಸ್ಟಿನಲ್ಲಿ ನಡೆಯುವ ಚಟುವಟಿಕೆಗಳನ್ನು ತಿಳಿಸುವುದರ ಮೂಲಕ ಅವರಿಗೆ ತಮ್ಮ ಸಹಾಯ ಹಸ್ತ ಹೇಗೆ ಟ್ರಸ್ಟಿನ ಬೆಳವಣಿಗೆಗೆ ಕಾರಣವಾಗುತ್ತಿದೆ ಮತ್ತು ಮುಂದೆ ಅದರ ಬೆಳವಣಿಗೆಗೆ ತಾವು ಹೇಗೆ ಹೆಚ್ಚು ಹೆಚ್ಚು ಸಹಾಯ ಮಾಡಬಹುದೆಂದು ಆಲೋಚಿಸಲು ನೆರವಾಗುವದೇ ಆಗಿದೆ.

ಟ್ರಸ್ಟಿನ ಅಭಿಮಾನಿಗಳ ಒಂದು ವಿಶೇಷತೆ ಏನೆಂದರೆ ಅವರು ಟ್ರಸ್ಟನ್ನು ತಮ್ಮ ಕುಟುಂಬದ ಒಂದು ಭಾಗವೆಂದೇ ಭಾವಿಸಿರುವುದು. ಆ ಕಾರಣದಿಂದ ಅಭಿಮಾನಿಗಳು ತಮ್ಮ ಕುಟುಂಬಕ್ಕೆ ಸೀಮಿತವಾದ ಕೆಲ ವಿಷಯಗಳಿದ್ದರೂ ಅದರಲ್ಲಿ ಟ್ರಸ್ಟನ್ನೂ ಸೇರಿಸಿಕೊಳ್ಳುತ್ತಾರೆ. ಈ ಉದ್ದೇಶ್ಯಕ್ಕಾಗಿ ಅವರು ಟ್ರಸ್ಟಿನ 'ಅಂತಃಕರಣಾ' ಎಂಬ ಯೋಜನೆಯನ್ನು ಉಪಯೋಗಿಸಿಕೊಳ್ಳುತ್ತಾರೆ. ತಮ್ಮ ಮನೆಯ ಹಿರಿಯರ ಹೆಸರಿನಲ್ಲಿ, ಕಿರಿಯರ ಜನ್ಮದಿನದ ಸಂತೋಷಕ್ಕಾಗಿ, ವಿವಾಹದ ವಾರ್ಷಿಕೋತ್ಸವದ ನೆನಪಿನಲ್ಲಿ, ಗೃಹಪ್ರವೇಶೋತ್ಸವದ ಸಂಭ್ರಮದ ನಿಮಿತ್ತವಾಗಿ ಟ್ರಸ್ಟಿನ ಆಶ್ರಯದಲ್ಲಿರುವ ಮಕ್ಕಳ ಊಟಕ್ಕಾಗಿ ಹಣವನ್ನು ಕಳುಹಿಸುತ್ತಾರೆ. ಅಲ್ಲದೆ, ಕೆಲವರು ಪ್ರತಿ ತಿಂಗಳೂ ಗೊತ್ತಾದ ಮೊಬಲಗನ್ನು ಕಳುಹಿಸುತ್ತಾರೆ.

ಇತ್ತೀಚೆಗೆ ಗಣೇಶನ ಹಬ್ಬದ ಸಂದರ್ಭದಲ್ಲಿ ಬೆಂಗಳೂರಿನ ಕೆರೋಡಿ ಟ್ರಸ್ಟಿನವರು ಹಣ ಕಳುಹಿಸಿದ್ದರು; ಮಕ್ಕಳ ಹಾಗೂ ಕಾರ್ಯಕರ್ತರ ಆರೋಗ್ಯದ ಹಿತಚಿಂತನೆಯನ್ನೂ ಮಾಡಿದ್ದರು.

ಮಾಹೆಯಾನ ದಾನಿಗಳಲ್ಲಿ ಒಬ್ಬರಾಗಿರುವ ಬೆಂಗಳೂರಿನ ಸುಜಾತಾ ಎಂಬುವವರು ತಮಗೆ ಉಪನ್ಯಾಸಕಿಯ ಕೆಲಸ ದೊರೆತದ್ದಕ್ಕಾಗಿ ಇನ್ನು ಮುಂದೆ

ಮಾಹೆಯಾನ ವಂತಿಕೆಯನ್ನು ತಪ್ಪದೆ ಕಳುಹಿಸಲು ತಮಗೆ ಸಾಧ್ಯವಾಗುವುದೆಂಬ ಸಂತೋಷವನ್ನ ತಿಳಿಸಿದ್ದಾರೆ. ಅವರಿಗೆ ಟ್ರಸ್ಟಿನ ಶುಭಾಶಯಗಳು.

ಕೆರೋಡಿ ಟ್ರಸ್ಟಿನವರಿಗೂ, ಸುಜಾತಾರವರಿಗೂ ಜನಪದ ಸೇವಾ ಟ್ರಸ್ಟ್ ತನ್ನ ಕೃತಜ್ಞತೆಯನ್ನು ಅರ್ಪಿಸುತ್ತದೆ.

ಟ್ರಸ್ಟಿನ ಇನ್ನೋರ್ವ ಅಭಿಮಾನಿ ಶ್ರೀ ವಿಶ್ವನಾಥ್‌ರವರು ತಮ್ಮ ನೂತನ ಮನೆಯ ಪ್ರವೇಶೋತ್ಸವವನ್ನು ಇಟ್ಟುಕೊಂಡಿದ್ದರು. ಅವರಿಗೆ ಟ್ರಸ್ಟ್ ಶುಭ ಹಾರೈಸುತ್ತದೆ.

ಗಾಂಧೀ ಜಯಂತಿಯಂದು ವಿಶೇಷ ಕಾರ್ಯಕ್ರಮಕ್ಕಾಗಿ ಟ್ರಸ್ಟಿನ ಅಭಿಮಾನಿ ಶ್ರೀ ರಮೇಶ್ ಕುಲಾಲ್ ಹಣ ಕಳುಹಿಸಿದ್ದಾರೆ. ಈ ಹಣ ಸಹಾಯವನ್ನು ಉಪಯೋಗಿಸಿಕೊಂಡು ವಿಶೇಷ ಕಾರ್ಯಕ್ರಮವನ್ನು ನಡೆಸಲು ಯೋಜನೆ ಹಾಕಿಕೊಳ್ಳಲಾಗಿದೆ.

ಇತ್ತೀಚಿಗೆ ನಡೆದ ಟ್ರಸ್ಟಿನ ವಿಶೇಷ ಸರ್ವ ಸದಸ್ಯರ ಸಭೆಯಲ್ಲಿ ಮೈಸೂರಿನ ಡಾ॥ ಮನೋಹರ ಮತ್ತು ಟ್ರಸ್ಟಿನ ಹಳೆಯ ವಿದ್ಯಾರ್ಥಿ ಶ್ರೀ ಸಂತೋಷ್ ಶೀಲವಂತ್‌ರನ್ನು ಆಹ್ವಾನಿತ ಸದಸ್ಯರನ್ನಾಗಿ ಆಯ್ಕೆ ಮಾಡಿಕೊಳ್ಳಲಾಯಿತು. ಪ್ರಿಸಂ ಪುಸ್ತಕೋದ್ಯಮದ ಪ್ರಮುಖರಾದ ಶ್ರೀ ಎಸ್. ಪ್ರಾಣೇಶ್‌ರವರನ್ನು ಧರ್ಮದರ್ಶಿಯನ್ನಾಗಿ ಪುನರಾಯ್ಕೆ ಮಾಡಲಾಯಿತು.

ಈ ಎಲ್ಲ ಮಹನಿಯರಿಗೂ ಹಾರ್ದಿಕ ಅಭಿನಂದನೆಗಳು.


ಶ್ರೀ ರಘುನಂದನ್ ಮತ್ತು ಶ್ರೀಮತಿ ಪದ್ಮಿನಿ ರಘುನಂದನ್ ಟ್ರಸ್ಟಿಗೆ ಭೇಟಿ ಕೊಟ್ಟು ತಮ್ಮ ತಾಯಿಯವರ ಸ್ಮರಣಾರ್ಥ ಅಂತಃಕರಣ ಯೋಜನೆಯ ಅಂಗವಾಗಿ ಧನಸಹಾಯಮಾಡಿದರು.

ಎಲ್ಲ ದಾನಿಗಳಿಗೂ, ಅಭಿಮಾನಿಗಳಿಗೂ ಹಾರ್ದಿಕ ಶುಭಾಶಯಗಳು.

– ಸುರೇಂದ್ರ ಕೌಲಗಿ

ಚಂದಿರ

ಚಂದಿರ ಚಂದಿರ
ಎಷ್ಟು ಸುಂದರ ಮಂದಿರ
ರಾತ್ರಿಯಲ್ಲಿ ಬೆಳಕನು ಸೂಸಿ
ದಾರಿ ತೋರುವೆ ಚಂದಿರ
ರಾತ್ರಿ ವೇಳೆ ತಾರೆಗಳೊಂದಿಗೆ
ಆಟವಾಡುವ ಚಂದಿರ
ಹಗಲು ಕಾಣುವುದಿಲ್ಲ
ಏಕೆ ನೀ ಚಂದಿರ



–ಸುಪ್ರಜ್

ನನ್ನ ಜೀವನ

-ಜಯಪ್ರಕಾಶ್‌ನಾರಾಯಣ್

(ಅಕ್ಟೋಬರ್೧೧ ಜಯಪ್ರಕಾಶ್ ನಾರಾಯಣರ ಜನ್ಮದಿನದ ಸ್ಮರಣೆಯಲ್ಲಿ)

ಜೀವನ ತುಂಬಿಹುದು ವಿಫಲತೆಗಳಿಂದೆ
ಸನಿಹ ಸನಿಹಕೆ ಬಂದ ಸಫಲತೆಯನೆ
ನನ್ನಯ ಮಾರ್ಗದಿಂ ತಳ್ಳಿಹಾಕಿದೆನು
ಅದನೆನೆ ಮೂರ್ಖತನವೆನ್ವನೇ?
ಸಫಲತೆ ವಿಫಲತೆಗಳ ಅರ್ಥ
ನಿತಾಂತ ಭಿನ್ನವಾಗಿಹುದೆನ್ನದು
ವರ್ಷಾನುವರ್ಷಗಳ ಕಥೆಯನಿತಿಹಾಸ ಪೇಳದೆ?
ಬೇಕೆನಿಸಿದಾಗ ಸಿಗದಿರುತ್ತಿತ್ತೆ ಪ್ರಧಾನಮಂತ್ರಿ ಪದವೆನೆಗೆ?
ಹೊರಟೆನಾದರೆ ಕ್ರಾಂತಿ ಶೋಧಕನಾಗಿ
ಭಿನ್ನ ಉದ್ದಿಷ್ಟ ಸಾಧಿಸುವವನಾಗಿ
ಭಿನ್ನ ಮಾರ್ಗ ತನಗೆ ಮಾನ್ಯವೆಂದಾಗಿ
ತ್ಯಾಗ ಸೇವಾ ನಿರ್ಮಾಣಕಾಗಿ
ಸಂಪೂರ್ಣಕ್ರಾಂತಿಯ ಹಾದಿ ಹಿಡಿದವನಾಗಿ
ಜಗವೆನ್ನುವುದಿದನು ವಿಫಲತೆ
ಆದರದು ಶೋಧನೆಯ ಹೆಜ್ಜೆ
ಹೆಜ್ಜೆಗಳಿಗೆ ಎಣಿಕೆಯಲ್ಲಿ?
ಧ್ಯೇಯ ವಿಹುದತಿ ದೂರದಲ್ಲಿ
ಎಲ್ಲೆಲ್ಲಿಯೂ ನಾನಿನಿತುನಿಲ್ಲನೊಲ್ಲೆ
ಅಡ್ಡಿ ತಡೆಗಳೇನಿದ್ದರೇನಂತೆ
ಆಶೆ ಪಾಶಗಳೆಂಬವೆನಗಿಲ್ಲವು
ಜಗದೀಶನಿಗರ್ಪಿತವೆಲ್ಲವು
ವಿಫಲತೆಯ ಬಗೆಗಾನು ಸಂತೃಪ್ತ
ವಿಫಲ ಜೀವನ ಧನ್ಯವದು ಶತಶತ
ಯದಿ ಸಹಯಾತ್ರಿ ಸಾಧರ್ಮ್ಯಯುವ ಯೂಥ
ತುಳಿವ ಕಲ್ಲು ಕಂಟೆಯ ಹಾದಿಯೂ ಕಷ್ಟ
ಸರಳ ಸುಗಮದೊಡನೆ ಮುಗಿಯಿತೆನ್ನಭೀಷ್ಟ

(ಜಯಪ್ರಕಾಶರು ಚಂಡೀಗಢ ಸೆರಮನೆಯಲ್ಲಿ ಆಗಸ್ಟ್ ೯,೧೯೭೫ ರಂದು ರಚಿಸಿದ್ದು)

ಅನು-ಸತ್ಯವ್ರತ

ಸನ್ಮಾನ್ಯರಿಂದ

ಈಗಿನ ವಿದ್ಯಮಾನದಲ್ಲಿ ಭಾವೋದ್ರೇಕಗೊಳ್ಳುವಂತಹ ವಿಷಯುಗಳಿಗೆ ಮತ್ತು ಭಾವಚಿತ್ರಗಳನ್ನೊಳಗೊಂಡ ಲೇಖನಗಳಿಗೆ ಹೆಚ್ಚು ಒತ್ತು ಕೊಡುವ ಪತ್ರಿಕೆಗಳಿಗಿಂತ ಭಿನ್ನವಾದ, ಪ್ರಚಲಿತ ವಿಷಯಗಳಿಗೆ ಆದ್ಯತೆ ಕೊಡುತ್ತಿರುವ ನಿಮ್ಮ ಚಿಂತನೆ, ಮುಂದಿನ ಪಿಳಿಗೆಗೆ ಮಾರ್ಗದರ್ಶಕ.

– ಆರೂರು ಮಂಜುನಾಥರಾವ್ ಉಡುಪಿ

ಸಂತಾಪ

ಶ್ರೀರಂಗಪಟ್ಟಣ ತಾಲ್ಲೂಕಿನಲ್ಲಿ ಸರ್ವೋದಯ ವಿಚಾರಗ ಹಿರಿಯ ಸಮರ್ಥಕರೂ, ಸಕ್ರಿಯ ಸಾರ್ವಜನಿಕ ಸೇವಾ ಧುರೀಣರೂ ಆಗಿದ್ದ ರುಕ್ಮಿಣಮ್ಮ ಬಂದೀಗೌಡರು 23 - 9 - 2007 ರಂದು ತಮ್ಮ ೮೦ ನೇ ವಯಸ್ಸಿನಲ್ಲಿ ವಿಧಿವಶರಾದರು. ಅವರಿಗೆ "ಜನಪದ ವಿಚಾರ"ವು ತನ್ನ ಸಂತಾಪವನ್ನು ವ್ಯಕ್ತಪಡಿಸುತ್ತಾ ಅವರ ಆತ್ಮಕ್ಕೆ ಶಾಂತಿಯನ್ನು ಕೋರುತ್ತದೆ.

"ಜನಪದ ವಿಚಾರ" ವೈಚಾರಿಕ ಮಾಸ ಪತ್ರಿಕೆಯನ್ನು ನೀವು ನೋಡಿದ್ದೀರಿ.

ಸಧ್ಯಕ್ಕೆ ಕರ್ನಾಟಕದಲ್ಲಿ ಗಾಂಧೀ ವಿಚಾರವನ್ನು ಮುಖ್ಯವಾಗಿ, ಸರ್ವೋದಯ ವಿಚಾರವನ್ನು ಜನತೆಗೆ ತಿಳಿಸುತ್ತಿರುವಂಥ ಪತ್ರಿಕೆ 'ಜನಪದ ವಿಚಾರ' ಒಂದೇ. ಈಗ ಭಾರತದಲ್ಲಿ ಮತ್ತು ವಿಶ್ವದ ಬೇರೆಡೆಯಲ್ಲಿ ಸಂಭವಿಸುತ್ತಿರುವ ಸಮಾಜಹಿತ ವಿರೋಧಿ ಬೆಳವಣಿಗೆಗಳನ್ನು ಸರಿಯಾಗಿ ವಿಶ್ಲೇಷಿಸಿ ಸರ್ವೋದಯ ಸಮಾಜ ರಚನೆಯ ಅಗತ್ಯವಿದೆಯೆಂದು ಜನತೆಗೆ ಮುಖ್ಯವಾಗಿ ಯುವಜನತೆಗೆ ತಿಳಿಸುವ ಮಹದ್ಕಾರ್ಯವನ್ನು ಮಾಡುವುದು ಇಂದಿನ ಯುಗಧರ್ಮವಾಗಿದೆ.

ಈ ಅಭಿಪ್ರಾಯವನ್ನು ಗಮನದಲ್ಲಿರಿಸಿಕೊಂಡು ಜನಪದ ವಿಚಾರಕ್ಕೆ ಯೋಗ್ಯವಾದ ಲೇಖನಗಳನ್ನು ಬರೆಯುಬಲ್ಲ ಸಮಾನಮನಸ್ಕರ ಬಳಗವೊಂದನ್ನು ರೂಪಿಸಲು ಉದ್ದೇಶಿಸಿದ್ದೇವೆ. ನೀವು ಸಮಾನಮನಸ್ಕರಲ್ಲಿ ಒಬ್ಬರಾಗಿರುವುದರಿಂದ ಜನಪದ ವಿಚಾರದ ಲೇಖಕರ ಬಳಗಕ್ಕೆ ನಿಮ್ಮನ್ನು ಗೌರವಾನ್ವಿತ ಲೇಖಕರನ್ನಾಗಿ ಆಯ್ಕೆಮಾಡಿಕೊಳ್ಳ ಬಯಸಿದ್ದೇವೆ.

ನೀವು ತಿಂಗಳಿಗೆ ಒಂದು ಲೇಖನವನ್ನು ಅಥವಾ ಪ್ರಚಲಿತ ವಿಷಯಗಳ ಬಗ್ಗೆ ನಿಮ್ಮ ಪ್ರತಿಕ್ರಿಯೆಗಳನ್ನು ಬರೆದು ಆಯಾ ತಿಂಗಳ 15 ನೇ ತಾರೀಖಿನೊಳಗೆ ಕಳುಹಿಸಿಕೊಡಬೇಕೆಂದು ಕೋರುತ್ತೇವೆ.

–ಸಂಪಾದಕರು

ಲೇಖನಗಳಲ್ಲಿಯ ವಿಚಾರಗಳಿಗೆ ಆಯಾ ಲೇಖಕರು ಹೊಣೆ (–ಸಂಪಾದಕರು)

ತೆರೆದ-ಅಂಚೆ

KA / SK / MND / 470 / 2006-2008
Regd. no. KAR / KAN / 2000 / 3820

ಶ್ರೀಮತಿ/ ಶ್ರೀ...

....

....

jANAPADA VICHARA - Kannada Monthly Digest Edited Printed and Published by Surendra Koulagi at Janapada Seva Trust Melkote, Dist- Mandya – 571431.DTP Sanketh, Melkote. Printed at INDIVARA, Nagamangala
Phone : 08236 – 298754 e-mail : janapada@yahoo.com